ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ನವೆಂಬರ್ 2017 ಮಾಸ ಪತ್ರಿಕೆ

ಸಂಪುಟ : 40
ಸಂಚಿಕೆ : 2
ಪುಟ : 12
ಬೆಲೆ : ₹ 10/-

## ನಮ್ಮ ಕರ್ನಾಟಕದ ಧೀಮಂತರು


ಕುಮಾರವ್ಯಾಸ


ಜಕಣಾಚಾರಿ




ಕನಕದಾಸ


ವೀಣೆ ಶೇಷಣ್ಣ


ಬಾಳಪ್ಪ ಹುಕ್ಕೇರಿ

ಕಾಳಿಂಗ ನಾವಡ



ಮುದ್ದಣ್ಣ

A Journal of Karnataka State Secondary Teachers' Association

# ಸಂಪಾದಕೀಯ

ಸುಖ ಜೀವನ ನಡೆಸುವುದು ಹೇಗೆ ಎಂದು ಕೇಳಿದರೆ ಕೈ ತುಂಬಾ ಹಣ ಸಂಪಾದಿಸಿ, ಶ್ರಮಪಡದೆ, ಯಾವುದಕ್ಕೂ ಕೊರತೆ ಇಲ್ಲದಂತೆ ಜೀವನ ನಡೆಸುವುದು ಎಂದು ಸಾಕಷ್ಟು ಜನ ಹೇಳಬಹುದು. ಅಂದರೆ ನಮ್ಮ ಅಗತ್ಯತೆಗೂ ಮೀರಿ ವೆಚ್ಚ ಮಾಡಿ ವೈಭವದ ವಿಲಾಸೀ ಜೀವನ ನಡೆಸುವುದು. ಹಾಗಾದರೆ ಶ್ರೀಮಂತರೆಲ್ಲರೂ ಸುಖಿಗಳೆ? ಹಣ, ಸಂಪತ್ತು ಗಳಿಕೆಗಳೇ ಸುಖ ತರುತ್ತದೆಯೇ ? ಬಡವರು ಸುಖಿಗಳಾಗಿರುವುದಿಲ್ಲವೇ ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತ ಹೋದರೆ ವಿಲಾಸೀ ಜೀವನದಿಂದ ಮಾತ್ರ ಸುಖ ಸಿಗುತ್ತದೆ ಎಂಬುದು ಭ್ರಮೆ ಎಂದು ತಿಳಿದು ಬರುತ್ತದೆ. ಹಾಗಾದರೆ ನಿಜವಾದ ಸುಖ ಯಾವುದು? ಜೀವನದಲ್ಲಿ ಹೇಗೆ ನಡೆದುಕೊಂಡರೆ ನೆಮ್ಮದಿ, ಸುಖ ಪಡೆಯಬಹುದು? ನಮ್ಮ ಜೀವನದ ರೀತಿ ನೀತಿಗಳು ಹೇಗಿರಬೇಕು? ಸಮಾಜದಲ್ಲಿ ನಮ್ಮ ನಡೆ-ನುಡಿಗಳು ಹೇಗಿರಬೇಕು, ಸಮಾಜದ ಹಿತ ಯಾವುದರಿಂದ - ಈ ಎಲ್ಲಾ ವಿಚಾರಗಳನ್ನು ಜಗದ್ಗುರುವಾದ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಅರ್ಜುನನಿಗೆ ಬೋಧಿಸಿದ್ದಾನೆ. ಆದ್ದರಿಂದಲೇ ಭಗವದ್ಗೀತೆಯನ್ನು ಪಠಿಸಿ, ಅನುಸರಿಸಿದರೆ ಜೀವನ ಸಾರ್ಥಕವಾಗುತ್ತದೆ. ನವೆಂಬರ್ 29 ಗೀತಾಜಯಂತಿ. ಈ ಸಂದರ್ಭದಲ್ಲಿ ಗೀತಾಚಾರ್ಯ ಶ್ರೀಕೃಷ್ಣನನ್ನು ಸ್ಮರಿಸೋಣ.

ಶ್ರೀಮಾತೆ ಶಾರದಾದೇವಿಯವರು ಶ್ರೀರಾಮಕೃಷ್ಣ ಪರಮಹಂಸರ ಧರ್ಮಪತ್ನಿಯಷ್ಟೇ ಅಲ್ಲ, ಸಾಧ್ವೀಮಣಿ ಕೂಡ. ಶಾರದಾದೇವಿಯವರು ಶಾಲೆಗೆ ಹೋಗಿ ಕಲಿಯದಿದ್ದರೂ, ಭಗವದ್ಗೀತೆಯಲ್ಲಿ ಬೋಧಿಸಿರುವಂತೆ ಜೀವನವನ್ನು ನಡೆಸಿ, ಎಲ್ಲರಿಗೂ ಮಾತೆಯಾಗಿ ಮಾತೃವಾತ್ಸಲ್ಯವನ್ನು ನೀಡಿದವರು. ಅಂದಿನ ಸಮಾಜಕ್ಕೆ ಮಾತ್ರವಲ್ಲದೆ ಆಧುನಿಕ ಸಮಾಜದ ಜನರಿಗೂ ಆದರ್ಶಪ್ರಾಯರಾಗಿರುವ ಶಾರದಾದೇವಿಯವರ ಜಯಂತಿ ಡಿಸೆಂಬರ್ 10ರಂದು. ಶ್ರೀಮಾತೆಯವರ ಆದರ್ಶಗಳನ್ನು ಸ್ಮರಿಸಿ ಕೃತಾರ್ಥರಾಗೋಣ.

ಕನ್ನಡ ರಾಜ್ಯೋತ್ಸವದ ಸಂಭ್ರಮ, ಉತ್ಸಾಹದ ಈ ತಿಂಗಳಿನಲ್ಲಿ ಜನಿಸಿದ ಹಲವಾರು ಕವಿ, ಸಾಹಿತಿಗಳು ತಮ್ಮ ಕೃತಿಕಾಣಿಕೆಯ ಮೂಲಕ ನಮ್ಮ ಸಾಹಿತ್ಯಾಭಿರುಚಿಯನ್ನು ಇಮ್ಮಡಿಗೊಳಿಸಿದ್ದಾರೆ. 19-20ನೆಯ ಶತಮಾನಗಳಲ್ಲಿ ಸಾಹಿತ್ಯ ರಚನೆ ಮಾಡಿದ ಮಹಿಳೆಯರು ಬೆರಳೆಣಿಕೆಯಷ್ಟು. ಅಂತಹ ಸಂದರ್ಭದಲ್ಲಿ ಉತ್ತಮ ಸಾಹಿತ್ಯ ರಚಿಸಿ ಜನಮನದಲ್ಲಿ ನೆಲೆಸಿದವರು ತಿರುಮಲೆ ರಾಜಮ್ಮನವರು. ಇವರು ನಾಡಿನ ಪ್ರಖ್ಯಾತ ವಿದ್ವಾಂಸರಾಗಿದ್ದ ಶ್ರೀ.ತಿ.ತಾ. ಶರ್ಮರ ಧರ್ಮಪತ್ನಿ. ವ್ಯಾಕರಣ, ಕಾವ್ಯರಚನೆಯಂತಹ ಶಾಸ್ತ್ರ ಗ್ರಂಥಗಳನ್ನು ರಚಿಸಿ, ಚಲಿಸುವ ನಿಘಂಟು ಎಂದೇ ಕರೆಯಲ್ಪಡುವ ಪ್ರಸಿದ್ಧ ಭಾಷಾಶಾಸ್ತ್ರಜ್ಞರು ಪ್ರೊ. ತೀ.ನಂ.ಶ್ರೀಕಂಠಯ್ಯನವರು. ಡಾ॥. ಎಂ. ಎಂ. ಕಲಬುರ್ಗಿಯವರು ಮತ್ತೊಬ್ಬ ಭಾಷಾಶಾಸ್ತ್ರಜ್ಞರು. ನವ್ಯ ಸಾಹಿತಿಗಳಲ್ಲಿ ಪ್ರಖ್ಯಾತರು ಡಾ॥ ಬಿ.ಸಿ. ರಾಮಚಂದ್ರಶರ್ಮರು. ಕಾದಂಬರಿ ಲೋಕದಲ್ಲಿ ತಮ್ಮದೇ ಛಾಪು ಮೂಡಿಸಿದವರು 20ನೆಯ ಶತಮಾನದ ಮೊದಲಲ್ಲಿದ್ದ ಎಂ.ಎಸ್. ಪುಟ್ಟಣ್ಣನವರು. 'ಕೊರವಂಜಿ' ಪತ್ರಿಕೆಯ ಮೂಲಕ ಹಾಸ್ಯಕಾರಂಜಿಯನ್ನು ಹರಿಸಿ ಜನಮನದಲ್ಲಿ ನೆಲೆಸಿದವರು 'ರಾಶಿ'(ಎಂ. ಶಿವರಾಂ). ವಚನ ಸಾಹಿತ್ಯದಲ್ಲಿ ವಿಶೇಷ ಅಧ್ಯಯನ ಕೈಗೊಂಡು ಸಂಶೋಧನೆ ನಡೆಸಿದ ವಿದ್ವಾಂಸರು ಸಂ.ಶಿ. ಭೂಸನೂರಮಠ ಹಾಗೂ ಶಿ.ಶಿ. ಬಸವನಾಳ. ಈ ಎಲ್ಲಾ ಸಾಹಿತ್ಯರತ್ನಗಳು ಜನಿಸಿದ್ದೂ ನವೆಂಬರ್ ತಿಂಗಳಿನಲ್ಲಿ.

ರಾಜ್ಯೋತ್ಸವ ಆಚರಣೆಯ ಸುಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪುರವರ ನೆನಪು ಎಲ್ಲ ಕನ್ನಡಿಗರಿಗೂ ಸಹಜವಾಗಿ ಬರುತ್ತದೆ. ಜ್ಞಾನಪೀಠಪ್ರಶಸ್ತಿ ಪುರಸ್ಕೃತ ಕುವೆಂಪುರವರು ಇಹಲೋಕ ತ್ಯಜಿಸಿದ್ದು ನವೆಂಬರ್ 10ರಂದು. ಅಂತೆಯೇ ನವ್ಯಕವಿ ಎಂ. ಗೋಪಾಲಕೃಷ್ಣ ಅಡಿಗರು, ದಿನಕರ ದೇಸಾಯಿ, ಕೈಲಾಸಂ, ಹಾ.ಮಾ. ನಾಯಕ್, ಜಿ.ಜಿ.ಎಲ್. ಸ್ವಾಮಿ, ಎಸ್. ಎಸ್. ಭೂಸನೂರಮಠರು ಮರಣಿಸಿದ್ದು ನವೆಂಬರ್‌ನಲ್ಲಿಯೆ. ಈ ಎಲ್ಲ ಮಹನೀಯರ ಕೃತಿಗಳ ಮೂಲಕ ಅವರನ್ನು ಸ್ಮರಿಸೋಣ.

ಭ್ರಷ್ಟಾಚಾರ' ಜಗತ್ತಿನಲ್ಲೆಡೆ ವ್ಯಾಪಿಸಿ ಸಮಾಜದ ಸ್ವಾಸ್ಥ್ಯವನ್ನು ಕೆಡಿಸಿರುವ ಬ್ರಹ್ಮರಾಕ್ಷಸ. ಭಾರತದಲ್ಲಂತೂ ಭ್ರಷ್ಟಾಚಾರದ ತಾಂಡವ ನೃತ್ಯ ಪ್ರತಿದಿನವೂ ನಮ್ಮ ಅನುಭವಕ್ಕೆ ಬರುತ್ತಿದೆ. ಭ್ರಷ್ಟಾಚಾರವನ್ನು ತೊಲಗಿಸಲು ಜನರೆಲ್ಲಾ ಒಟ್ಟಾಗಿ ಹೋರಾಡಬೇಕಾಗಿದೆ. ಹಾಗಾಗಿ ಪ್ರತಿ ವರ್ಷ ಡಿಸೆಂಬರ್ 9ರಂದು ಅಂತರರಾಷ್ಟ್ರೀಯ ಭ್ರಷ್ಟಾಚಾರ ವಿರೋಧೀ ದಿನವಾಗಿ ಆಚರಿಸಲಾಗುತ್ತದೆ. ಇದು ಕೇವಲ ಆಚರಣೆ ಮಾತ್ರವಾಗದೆ ಸರ್ಕಾರ, ಆಡಳಿತ ಯಂತ್ರಗಳು, ಸಾರ್ವಜನಿಕರು ಮನಸ್ಸು ಮಾಡಿ ಸಮಾಜದಿಂದ ಬೇರುಸಹಿತ ಕಿತ್ತೊಗಯಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ.

ಸಂಪಾದಕರು

## ಸೂಕ್ತಿ



ಉದ್ಧರೇದಾತ್ಮನಾತ್ಮಾನಂ
ನಾತ್ಮಾನಮವಸಾದಯೇತ್ ।
ಆತ್ಮೈವಹ್ಯಾತ್ಮನೋ ಬಂಧುರಾತ್ಮೈವ
ರಿಪುರಾತ್ಮನಃ ॥

ಮನಸ್ಸಿನಿಂದಲೇ ತನ್ನನ್ನು ಉದ್ಧಾರ ಮಾಡಿಕೊಳ್ಳಬೇಕು, ತನ್ನನ್ನು ಕುಗ್ಗಿಸಿಕೊಳ್ಳಬಾರದು ; ಏಕೆಂದರೆ ಮನಸ್ಸೇ ತನ್ನ ಬಂಧು, ಮನಸ್ಸೇ ತನ್ನ ಶತ್ರು".

- ಶ್ರೀಮದ್ಭಗವದ್ಗೀತೆ

## ಪರಿವಿಡಿ


- ರಾಜ್ಯ ಕಾರ್ಯಕಾರಿಣಿ ಸಭೆ 3
- ಶಿಕ್ಷಕರಿಗೊಂದು ಮೇಲ್ಪಂಕ್ತಿ 4
- ಗೀತಾ ಜಯಂತಿ 5
- ರಾಷ್ಟ್ರೀಯ ಕಾರ್ಯಕಾರಿಣಿಯ ವರದಿ 6
- ಕೊಠಾರಿ ಶಿಕ್ಷಣ ಆಯೋಗ 7
- ಕವನಗಳು 8
- ಶ್ರೀಮಾತಾ ಶಾರದಾದೇವಿ 9
- ಶಿಕ್ಷಕರಿಗೊಂದು ದಾರಿದೀಪ ಕೃ. ನರಹರಿ 11
- ಚಿತ್ರಸುದ್ದಿ 12

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ
# ರಾಜ್ಯ ಕಾರ್ಯಕಾರಿಣಿ ಸಭೆ

## ದಿನಾಂಕ 12.11.17 ರಂದು ಹುಬ್ಬಳ್ಳಿ ಬನಶಂಕರಿ ಬಡಾವಣೆಯ ಸೇವಾ ಸದನದಲ್ಲಿ ನಡೆದ 'ಕಾರ್ಯಕಾರಿಣಿಯ ವರದಿ'

ವರದಿ : **ಶ್ರೀ ಸಂದೀಪ ಬೂದಿಹಾಳ**
**ರಾಜ್ಯ ಪ್ರಧಾನ ಕಾರ್ಯದರ್ಶಿ**
**94491 93705**

ಶಿಕ್ಷಕರ ವೇತನ ತಾರತಮ್ಯವನ್ನು ನಿವಾರಿಸಲು 'ಒಂದು ದೇಶ, ಒಂದು ಶಿಕ್ಷಣ, ಒಂದು ವೇತನ' ವ್ಯವಸ್ಥೆಯನ್ನು ಜಾರಿಗೊಳಿಸಬೇಕೆಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಒತ್ತಾಯಿಸಿದೆ.

ದೇಶದ 30 ರಾಜ್ಯಗಳಲ್ಲಿ ಕೇಂದ್ರ ಸರ್ಕಾರ ಶಿಕ್ಷಕರಿಗೆ ನೀಡುತ್ತಿರುವ ವೇತನ ಶ್ರೇಣಿಯನ್ನು ಜಾರಿ ಮಾಡಲಾಗಿದೆ. ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಕೇಂದ್ರ ಮಾದರಿಯ ವೇತನ ಜಾರಿಯಾಗಿಲ್ಲ, ಹಾಗಾಗಿ ಇಡೀ ದೇಶಕ್ಕೆ ಅನ್ವಯ ವಾಗುವಂತೆ ಒಂದೇ ದೇಶ, – ಒಂದೇ ಶಿಕ್ಷಣ, – ಒಂದೇ ವೇತನ ವ್ಯವಸ್ಥೆಯನ್ನು ಜಾರಿಗೊಳಿಸುವ ಅಗತ್ಯವಿದೆ ಎಂದು ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷ ಶ್ರೀ ಶಿವಾನಂದ ಸಿಂಧನಕೇರಾ ಮತ್ತು ದಕ್ಷಿಣ ಭಾರತ ಪ್ರಮುಖ ಪ್ರೊ. ಬಾಲಕೃಷ್ಣ ಭಟ್ ಮಾಧ್ಯಮಿಕ ಶಿಕ್ಷಕ ಸಂಘ ರಾಜ್ಯ ಕಾರ್ಯಕಾರಿಣಿಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳಲ್ಲಿ ಕೇಂದ್ರದ 7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಶಿಕ್ಷಕರಿಗೆ ಯಥಾವತ್ತಾಗಿ ಜಾರಿ ಮಾಡಲಾಗಿದೆ, ರಾಜ್ಯದಲ್ಲಿ ಮಾತ್ರ ವೇತನ ಆಯೋಗ ರಚನೆ ಮಾಡಲಾಗಿದೆ. ಇದಕ್ಕೆಲ್ಲಾ ಕೊನೆ ಹಾಡಲು ಒಂದೇ ದೇಶ– ಒಂದೇ ಶಿಕ್ಷಣ, – ಒಂದೇ ವೇತನ ವ್ಯವಸ್ಥೆ ಜಾರಿಯಾಗಬೇಕು ಎಂದರು.

ಈ ವ್ಯವಸ್ಥೆ ಜಾರಿಯಿಂದ ಶಿಕ್ಷಣದ ಪಠ್ಯಕ್ರಮದಲ್ಲೂ ಏಕರೂಪತೆ ಬರುವ ಜತೆಗೆ ಶಿಕ್ಷಕರ ಸಂಬಳದ ತಾರತಮ್ಯವೂ ನಿವಾರಣೆಯಾಗಿ ಶಿಕ್ಷಣದ ಗುಣಮಟ್ಟ ಹೆಚ್ಚುತ್ತದೆ ಎಂದು ನಿರ್ಣಯ ಕೈಗೊಳ್ಳಲಾಯಿತು.

ಶಿಕ್ಷಕರ ನಿವೃತ್ತಿ ವಯಸ್ಸಿನಲ್ಲಿ ಏಕರೂಪತೆ ಜಾರಿಯಾಗಬೇಕು, ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ನಿವೃತ್ತಿ ವಯಸ್ಸು 65ಕ್ಕೆ ನಿಗದಿಯಾಗಬೇಕು.

ದೇಶದ ಶಿಕ್ಷಣದ ಬಗ್ಗೆ ನಿಷ್ಪಕ್ಷಪಾತವಾದ ಮೌಲ್ಯಮಾಪನ ಆಗಬೇಕು, ಜತೆಗೆ ಚೀನಾ ವಸ್ತುಗಳ ವಿರುದ್ಧ ಆಂದೋಲನ ನಡೆಯುತ್ತಿರುವ ಈ ಸಂದರ್ಭದಲ್ಲಿ ಸ್ವದೇಶಿ ವಸ್ತುಗಳ ಬಳಕೆಯ ಬಗ್ಗೆಯೂ ಜಾಗೃತಿ ಮೂಡಿಸುವ ಕೆಲಸ ಆಗಬೇಕು, ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂಬ ನಿರ್ಣಯವನ್ನು ಕೈಗೊಳ್ಳಲಾಯಿತು.

ಶಿಕ್ಷಕರಿಗೆ ಸಂಬಂಧಿಸಿದಂತೆ 23 ಸಮಸ್ಯೆಗಳ ಪಟ್ಟಿಯನ್ನು ತಯಾರಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನೀಡಲಾಗಿದೆ.

ಶಿಕ್ಷಣ ವ್ಯವಸ್ಥೆಯಲ್ಲಿ ಅದರಲ್ಲೂ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಂತದಲ್ಲಿ ಮಹಿಳಾ ಶಿಕ್ಷಕಿಯರ ಸ್ಥಿತಿಗತಿ, ಸುರಕ್ಷತೆ, ಅವರಿಗೆ ಸಿಗುತ್ತಿರುವ ಸೌಲಭ್ಯಗಳು ಎಲ್ಲದರ ಬಗ್ಗೆಯೂ ಸಮೀಕ್ಷೆ ನಡೆಸುವ ಕಾರ್ಯವನ್ನು ಆರಂಭಿಸಲಾಗಿದೆ. ಕರ್ನಾಟಕ ರಾಜ್ಯದ ತುಂಬಾ ಸುಮಾರು 20 ಸಾವಿರ ಶಿಕ್ಷಕಿಯರನ್ನು ಭೇಟಿ ಮಾಡಿ ಮಾಹಿತಿ ಕಲೆ ಹಾಕಲು ಜಿಲ್ಲಾವಾರು ಗುರಿ ನಿರ್ಧರಿಸಲಾಯಿತು. ಈ ಸಮೀಕ್ಷೆಯ ಸಂಪೂರ್ಣ ಜವಾಬ್ದಾರಿಯನ್ನು ABRSM ರಾಷ್ಟ್ರೀಯ ಮಹಿಳಾ ಸಹಕಾರ್ಯದರ್ಶಿ ಶ್ರೀಮತಿ ಮಮತಾ ಡಿ.ಕೆ. ಇವರಿಗೆ ವಹಿಸಲಾಯಿತು.

ದಿನಾಂಕ 1/08/2008 ರ ನಂತರ ನೇಮಕಾತಿಯಾದ ಶಿಕ್ಷಕರಿಗೆ ಪಾವತಿಸಿರುವ ವಿಶೇಷ ಭತ್ಯೆಯನ್ನು ವಸೂಲಿ ಮಾಡುವಂತೆ ದಿನಾಂಕ 4/11/2017 ರಂದು ಎಲ್ಲ ಸಂಬಳ ಬಟವಾಡೆ ಅಧಿಕಾರಿಗಳಿಗೆ ನೀಡಿರುವ ಸೂಚನೆಯನ್ನು ಹಿಂಪಡೆಯವುದು, ಈಗಾಗಲೇ ಪಾವತಿಸಿದ ಸಂಬಳವನ್ನು ಮರಳಿ ತುಂಬುವಂತೆ ಸೂಚಿಸುವುದು ಸಮಂಜಸವಲ್ಲ, ಅಧಿಕಾರಿಗಳು ಮಾಡಿದ ತಪ್ಪಿಗೆ ಅವರ ಮೇಲೆ ಕ್ರಮಕೈಗೊಳ್ಳುವುದನ್ನು ಬಿಟ್ಟು ಶಿಕ್ಷಕರಿಂದ ಹಣ ಮರು ಪಾವತಿಗೆ ಆದೇಶಿಸಿರುವುದು ಶಿಕ್ಷಕರಲ್ಲಿ ಕಳವಳಕ್ಕೆ ಕಾರಣವಾಗಿದೆ, ಆದ್ದರಿಂದ ಇಲ್ಲಿಯವರೆಗೆ ಪಾವತಿಸಿದ ವಿಶೇಷ ಭತ್ಯೆಯ ವಸೂಲಾತಿಯನ್ನು ಕೈಬಿಟ್ಟು ಎಲ್ಲಾ ಶಿಕ್ಷಕರಿಗೆ ಸಮಾನವಾಗಿ ವಿಶೇಷ ಭತ್ಯೆ ನೀಡುವಂತೆ ಸರಕಾರಿ ಆದೇಶ ಹೊರಡಿಸಲು ಆಗ್ರಹಿಸುವಂತೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲು ಕಾರ್ಯಕಾರಿಣಿಯಲ್ಲಿ ನಿರ್ಣಯಿಸಲಾಯಿತು.

ಕಾರ್ಯಕಾರಿಣಿಯಲ್ಲಿ ಇಲ್ಲಿಯವರೆಗೂ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವ ಶ್ರೀ ಶಿವಾನಂದ ಸಿಂಧನಕೇರಾ ಇವರು ಇತ್ತೀಚಿಗೆ ಮಹಾರಾಷ್ಟ್ರದ ಅಮರಾವತಿಯಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ

**ಪುಟ 10 ಕ್ಕೆ ➤**

# ಶಿಕ್ಷಕರಿಗೊಂದು ಮೇಲ್ಪಂಕ್ತಿ

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ಶಿಕ್ಷಕರಲ್ಲಿ ಮೂರು ಬಗೆ. ಕೆಲವರು ಶ್ರದ್ಧಾಪೂರ್ವಕವಾಗಿ ಶಿಕ್ಷಕ ವೃತ್ತಿಯನ್ನು ಆಯ್ಕೆಮಾಡಿಕೊಂಡವರು, ಮತ್ತೆ ಕೆಲವರು ಆಕಸ್ಮಿಕವಾಗಿ ಆಯ್ಕೆ ಮಾಡಿಕೊಂಡವರು, ಮೂರನೇ ಬಗೆಯವರು ತಮ್ಮ ಹಣೇಬರಹಕ್ಕೆ ಶಾಪಹಾಕಿಕೊಂಡು ಶಿಕ್ಷಕ ವೃತ್ತಿಯನ್ನು ಬೇಕಾಬಿಟ್ಟಿ ಮಾಡುವವರು.

ಕೃ. ನರಹರಿಯವರು ಮೊದಲ ಗುಂಪಿಗೆ ಸೇರುವವರು. ತಮ್ಮ ಬಿ.ಎಸ್.ಸಿ,. ಬಿ.ಇ ಪದವಿ ಪೂರ್ಣಗೊಳ್ಳುವ ಮೊದಲೇ ಸಂಕಲ್ಪಮಾಡಿದ್ದು ತಾನು ಅಧ್ಯಾಪಕನಾಗಬೇಕೆಂದು. ಅದು ಅವರ ಪ್ರವೃತ್ತಿಗೆ ಸಂದದ್ದು.

ಕಿಶೋರಾವಸ್ಥೆಯಲ್ಲೇ ತಾನು ಸ್ವೀಕರಿಸಿದ ಸಮಾಜಸೇವೆಯ ಆ ಜೀವನ ವ್ರತಕ್ಕೆ ಶಿಕ್ಷಕ ವೃತ್ತಿ ಪೂರಕ. ತರುಣರ ಮೂಲಕ ಸುಂದರ ಭವಿಷ್ಯದ ಭಾರತವನ್ನು ನಿರ್ಮಾಣ ಮಾಡುವ ತನ್ನ ಕನಸನ್ನು ನನಸು ಮಾಡಲು ರಾಜಪಥ ಎಂದು ಭಾವಿಸಿಯೇ ಅವರು ಶಿಕ್ಷಕರಾದದ್ದು.

ಅವರು ಕೇವಲ ಕಾಲೇಜಿನ ಸಮಯದಲ್ಲಿ ಶಿಕ್ಷಕರಾಗಿರಲಿಲ್ಲ. ತಮ್ಮ ಸಂಪರ್ಕಕ್ಕೆ ಬಂದವರೆಲ್ಲರಿಗೂ ಶಿಕ್ಷಕರೇ. ಅವರಿಂದ ಏನನ್ನಾದರೂ ಹೊಸತನ್ನು ಕಲಿತವರು ಸಹಸ್ರಾರು ಜನ. ನನ್ನ ಗೆಳೆಯರನೇಕರು ಅವರಿಂದ ಕಲಿತ ಸಣ್ಣ ಪುಟ್ಟ ಸಂಗತಿಗಳನ್ನು ನನ್ನೊಂದಿಗೆ ಹಂಚಿಕೊಂಡಿದ್ದಾರೆ.

ಪತ್ರಕರ್ತಗೆಳೆಯ, ದು.ಗು.ಲಕ್ಷ್ಮಣ 'ಆಸೆ– ನಿರಾಸೆಗಳನ್ನು ಸಮಭಾವದಿಂದ ಸ್ವೀಕರಿಸುವುದನ್ನು' ಅವರಿಂದ ಕಲಿತೆ ಎಂದೊಮ್ಮೆ ತಿಳಿಸಿದರು. ವಕೀಲ ಭೋಜರಾಜ್ Nut and bolt ನಲ್ಲಿ bolt ಅನ್ನು ಬಲಗಡೆಗೇ ಏಕೆ ತಿರುಗಿಸಬೇಕೆಂಬ ಸಣ್ಣ ವಿಷಯವನ್ನೂ ಅವರು ನನಗೆ ತಿಳಿಸಿದರು ಎಂದು ತಮ್ಮ ಅನುಭವ ಹಂಚಿಕೊಂಡರು. ತರಗತಿಯಲ್ಲಿ ಮೊದಲ ಬೆಂಚು ಹಾಗೂ ಕೊನೇ ಬೆಂಚಿನವರನ್ನು ಸಮಾನವಾಗಿ ಕಾಣಬೇಕೆಂಬ ಪಾಠ ನಾನು ಅವರಿಂದ ಕಲಿತೆ. ಗೆಳೆಯ ವಿ.ನಾಗರಾಜ್‌ಗೆ ಅವರು ಕಲಿಸಿದ ಪಾಠ 'ರೂಪಾಯಿ ನೋಟನ್ನು ಜೇಬಿನಲ್ಲಿ ಮುದುಡಿ ಇಟ್ಟುಕೊಳ್ಳಬಾರದು. ಅದು ನಮ್ಮ ಸ್ವಂತದಲ್ಲ, ದೇಶದ ಆಸ್ತಿ. ಅದು ತುಂಬ ಸಮಯ ಚಲಾವಣೆಯಲ್ಲಿ ಇರಬೇಕಾದರೆ ಅದನ್ನು ಯಾವಾಗಲೂ ಪರ್ಸ್‌ನಲ್ಲೇ ಇಡಬೇಕು' ಎಂಬ ಸಂಗತಿ. ನಾವು ಯಾರಿಗಾದರೂ ಒಂದು ಕೆಲಸ ಹೇಳುವ ಮೊದಲು ಅದನ್ನು ನಾವು ಮಾಡಿ ಅನುಭವ ಸಂಪಾದಿಸಬೇಕೆಂಬ ಪಾಠ ನಾನು ಅವರಿಂದಲೇ ಕಲಿತದ್ದು. ಅವರು ಎಲ್ಲರಿಗೂ ಕಲಿಸಿದ್ದು ಜೀವನ ಪಾಠವನ್ನೇ! ಹೊಟ್ಟೆ ಹೊರೆಯುವ ಪಾಠವನ್ನೆಲ್ಲ ಇದೇ ಅಲ್ಲವೇ ನಿಜವಾದ ಶಿಕ್ಷಕನ ಲಕ್ಷಣ.

'ತನಗಾಗಿ ಸ್ವಲ್ಪ, ಸಮಾಜಕ್ಕೆ ಸರ್ವಸ್ವ' ಎಂಬ ವ್ರತಧಾರಿ ಅವರು. ಈ ವ್ರತ ಸಾರ್ಥಕವಾಗಲೆಂದೇ ಸಂಸಾರದ ಬಂಧನಕ್ಕೆ ಸಿಲುಕದೆ ಸನ್ಯಾಸ ಜೀವನವನ್ನು ಆರಿಸಿಕೊಂಡರು. ಆಜೀವನ ಬ್ರಹ್ಮಚಾರಿಯಾಗುಳಿಯುವ ಕಠಿಣ ನಿರ್ಧಾರ ಮಾಡಿದರು.

ಅವರು ಕಾಲೇಜಿನಲ್ಲಿ ಮಾಡುತ್ತಿದ್ದ ಪಾಠ ಯಂತ್ರಶಾಸ್ತ್ರ. ಅವರ ಶಿಷ್ಯರನೇಕರು ಅವರು ಪಾಠ ಮಾಡುತ್ತಿದ್ದ ವೈಖರಿಯನ್ನು ಇಂದಿಗೂ ನೆನೆಸಿಕೊಳ್ಳುತ್ತಾರೆ. 'ತನ್ನ ಶಿಷ್ಯರು ತನ್ನನ್ನೂ ಮೀರಿ ಬೆಳೆದಾಗ ಆನಂದ ಬಾಷ್ಪ ಸುರಿಸುವವರು ನಮ್ಮ ಮೇಷ್ಟ್ರು ಮಾತನ್ನು ತುಮಕೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ॥ ಎಸ್.ಸಿ.ಶರ್ಮರವರು ಇಂದಿಗೂ ನೆನೆಸಿಕೊಳ್ಳುತ್ತಾರೆ.

ಅನೇಕ ಬಡ ವಿದ್ಯಾರ್ಥಿಗಳಿಗೆ ಅವರು ಮಾಡಿದ ಸಹಾಯ ಅವರಿಗೇ ನೆನಪಿಲ್ಲ. ಬಲಗೈ ಕೊಟ್ಟಿದ್ದನ್ನು ಎಡಗೈ ತಿಳಿಯಬಾರದು ಎಂಬ ಏಸು ಕ್ರಿಸ್ತನ ಮಾತಲ್ಲಿ ನಂಬಿಕೆ ಇಟ್ಟವರು ಕೃ.ನರಹರಿಯವರು. ಕೇವಲ ವಿದ್ಯಾರ್ಥಿಗಳಷ್ಟೇ ಅಲ್ಲ, ಸಹಾಯಬೇಡಿ ಬಂದವರಿಗೆ, ಕಷ್ಟದಲ್ಲಿರುವವರನ್ನು ಕಂಡಾಗ ಅವರ ಮಾತೃ ಹೃದಯ ಕರಗಿ ನೀರಾಗುತ್ತಿತ್ತು. ಎಷ್ಟೋಬಾರಿ ಅವರು ನನ್ನ ಬಳಿ ಹೇಳಿದ್ದುಂಟು. 'ನೋಡಪ್ಪಾ, ಆ ಮೇಷ್ಟ್ರು ತುಂಬಾ ದೂರದ ಊರಿನಿಂದ ಬಂದಿದ್ದ. ಆಯುಕ್ತರ ಕಛೇರಿಗೆ ಕರೆದೊಯ್ದಿದ್ದೆ. ಅವನ ಕೆಲಸ ಆಗಲು ಇನ್ನೂ 15–20 ದಿನವಾದರೂ ಆಗಬಹುದು. ಅವನ ಸ್ಥಿತಿ ನೆನೆಸಿಕೊಂಡು ರಾತ್ರಿ ಇಡೀ ನಿದ್ದೆ ಬರಲಿಲ್ಲ. ನಮ್ಮ ಆಡಳಿತಶಾಹಿಗೆ ಹೃದಯವೇ ಇಲ್ಲವೆಂದೆನಿಸುತ್ತೆ." ಎಷ್ಟು ಜನ ಶಾಸಕರು ಜನರ ಕಷ್ಟಕ್ಕೆ ಮರುಗಿ ನಿದ್ದೆ ಕಳೆದುಕೊಂಡಿದ್ದಾರು? ಇಂದಿನ ಶಾಸಕರಿಗೆಲ್ಲಾ ಇದು ಜೀವನ ಪಾಠವಾಗದೇ? ಭವಿಷ್ಯದ ಶಾಸಕರನ್ನೇ ರೂಪಿಸುವ ಅಧ್ಯಾಪಕರಾದ ನಾವು ನಮ್ಮ ತರಗತಿಗಳಲ್ಲಿ ಈ ಎಲ್ಲ ಘಟನೆಗಳನ್ನು ಹೇಳಬಹುದಲ್ಲವೇ?

ನರಹರಿಯವರ ಬಹುಮುಖ ಸೇವೆಯನ್ನು ಬರೆಯಲು ಹೊರಟರೆ ಅದೊಂದು ಉದ್ಗ್ರಂಥವಾದೀತು. ಅನ್ನ ಆಗಿದೆಯೇ ಇಲ್ಲವೇ ಎಂದು ನೋಡಲು ಒಂದು ಕಾಳನ್ನು ಹಿಸುಕಿ ನೋಡಿದಂತೆ ನಾನು ಅವರ ಒಂದೆರಡು ಮುಖಗಳನ್ನು ಅನಾವರಣಗೊಳಿಸಿರುವೆ. ಅದೆಲ್ಲದರ ಸಂದೇಶವನ್ನು ನಮ್ಮ ಮನಸ್ಸಿನಲ್ಲಿ ತುಂಬಿಕೊಂಡು ಮುಂದಿನ ಪೀಳಿಗೆಗೆ ದಾಟಿಸಿದರೆ ಸಮಾಜಕ್ಕೆ ನಮ್ಮದೂ ಒಂದು ಅಳಿಲ ಸೇವೆಯಾದೀತು ಅಲ್ಲವೇ?

●

# ಗೀತಾ ಜಯಂತಿ

ಮನು
ಬೆಂಗಳೂರು

**ಸರ್ವವೇದಮಯೀ ಗೀತಾ ಸರ್ವಧರ್ಮ ಮಯೋ ಮನುಃ ।**
**ಸರ್ವತೀರ್ಥಮಯಿ ಗಂಗಾ ಸರ್ವದೇವ ಮಯೋ ಹರಿಃ ॥**
**ಪಾದಾಸ್ಯಾಪ್ಯರ್ಧ ಪಾದಂ ವಾ ಶ್ಲೋಕಂ ಶ್ಲೋಕಾರ್ಧಮೇವ ವಾ।**
**ನಿತ್ಯಾಂ ಧಾರಯತೇ ಯಸ್ತು ಸ ಮೋಕ್ಷಮಧಿಗಚ್ಛತಿ ॥**

ಈ ಎಲ್ಲವೂ ಗೀತೆಯ ಮಹತ್ತ್ವವನ್ನು ತಿಳಿಸುತ್ತವೆ. ಗೀತೆಯು ಶಕ್ತಿಯ, ಜ್ಞಾನದ ಮೂಲ. ಆರು ಸಾವಿರ ವರ್ಷಗಳ ಹಿಂದೆ ದ್ವಾಪರಯುಗದಲ್ಲಿ ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ಈ ಜ್ಞಾನಭಂಡಾರ ಜೀವನದ ಸಂದೇಶ–ವೇದಾಂತದ, ಜ್ಞಾನದ ಉದಾತ್ತ ತತ್ವಗಳನ್ನು ಇದು ತಿಳಿಸುತ್ತದೆ. ಇಡೀ ಮಾನವಕೋಟಿಗೆ ಸಂಬಂಧಿಸಿದಂತೆ ದೇಶ, ವರ್ಗ, ಕಾಲಾತೀತ ವಿಚಾರಗಳ ಆಕರ. ಇದು ವಿಶ್ವವ್ಯಾಪಿಯಾದ ಸತ್ಯವನ್ನು ಒಳಗೊಂಡದ್ದು.



ಮಾರ್ಗಶಿರಮಾಸದ ಶುಕ್ಲಪಕ್ಷದ ಹನ್ನೊಂದನೆಯ ದಿನವೇ ಶ್ರೀಕೃಷ್ಣನು ಗೀತೆಯನ್ನು ಅರ್ಜುನನಿಗೆ ಬೋಧಿಸಿದ ದಿನವೆಂದು 'ಗೀತಾ ಜಯಂತಿ' ಯನ್ನು ಆಚರಿಸ ಲಾಗುತ್ತದೆ. ಸನಾತನ ಧರ್ಮವನ್ನು ಪಾಲಿಸುವ ಸಾವಿರಾರು ಭಕ್ತಾದಿಗಳಿಂದ ಪ್ರಪಂಚದಾದ್ಯಂತ ಇದರ ಆಚರಣೆ ನಡೆಯುತ್ತದೆ. ಇಡೀ ದಿನ ಗೀತಾಪಠಣ ಉಪವಾಸ, ಭಜನೆ ಇತ್ಯಾದಿ ನಡೆಯುತ್ತದೆ. ಗೀತೆಯ ಪುಸ್ತಕಗಳ ಉಚಿತ ವಿತರಣೆಯೂ ಇರುತ್ತದೆ. ಗೀತಾಜಯಂತಿಯ ದಿನ ಮೋಕ್ಷದ ಏಕಾದಶಿಯೂ ಇರುವುದರಿಂದ ಅನೇಕ ಭಕ್ತರು ಅಂದು ಉಪವಾಸವ್ರತವನ್ನು ಕೈಗೊಳ್ಳುತ್ತಾರೆ.

ಗೀತೆಯ ಮಹತ್ತ್ವವಿರುವುದು ಅದು ಪ್ರತಿಯೊಬ್ಬರನ್ನೂ ಚಿಂತನೆಯ ದಾರಿಗೆ ಹಚ್ಚುವುದರಲ್ಲಿ. ಬದುಕಿನ ನಾನಾ ಘಟ್ಟಗಳಲ್ಲಿ ಸೂಕ್ತ ನಿರ್ಧಾರಗಳನ್ನು ಮಾಡುವುದರಲ್ಲಿ. ಜೀವನವನ್ನು ಹೊಸದೃಷ್ಟಿಯಿಂದ ನೋಡುವಂತೆ ಮಾರ್ಗದರ್ಶನ ನೀಡುವುದರಲ್ಲಿ, ಸ್ವಂತಿಕೆಯನ್ನು ಕಾಪಾಡಿಕೊಳ್ಳುವುದರಲ್ಲಿ, ಒಟ್ಟಾರೆಯಾಗಿ ಗೀತೆಯು ವೈಚಾರಿಕತೆಯನ್ನು ಬೆಳೆಸಿಕೊಳ್ಳಲು ಸಹಕರಿಸುತ್ತದೆ. ಸಾವಿರಾರು ವರ್ಷಗಳ ಹಿಂದೆ ಗೀತಾಬೋಧನೆ ನಡೆಯಿತೆಂದು ತಿಳಿದಿರುವುದಾದರೂ ಅದರಲ್ಲಿ ಪ್ರಸ್ತಾಪಿಸಿರುವ ಪ್ರತಿಯೊಂದು ವಿಚಾರವೂ ಸಹ ಪ್ರಸ್ತುತಕ್ಕೆ ಅನ್ವಯ ವಾಗುವಂತೆಯೇ ಇದೆ. ಏಳುನೂರು ಶ್ಲೋಕಗಳಲ್ಲಿ ಹದಿನೆಂಟು ಅಧ್ಯಾಯಗಳಲ್ಲಿ ವಿವರಿಸಿರುವ ವಿಚಾರಗಳು ಕರ್ಮಯೋಗ, ಭಕ್ತಿಯೋಗ ಮತ್ತು ಜ್ಞಾನಯೋಗ ಎಂದು ಮೂರು ಬಗೆಗಳಲ್ಲಿ ಬದುಕಿನ ಧ್ಯೇಯವನ್ನು ತಿಳಿಸುತ್ತವೆ. ಕರ್ತವ್ಯವನ್ನು ತಿಳಿಸುತ್ತವೆ. ಉತ್ತಮ ನಡವಳಿಕೆಯನ್ನು ಕಲಿಯುವ ಬಗೆಯನ್ನು ಕಲಿಸುತ್ತವೆ.

"ಭಗವಂತನ ಗೀತೆ' ಎಂಬ ಅರ್ಥವನ್ನು ಹೊಂದಿರುವ ಈ ಗೀತೆಯಲ್ಲಿ ಜ್ಞಾನಯೋಗವು ಜೀವನದ ಅತ್ಯುಚ್ಚ ಸ್ಥಿತಿಯೆಂದೂ ಆದರೆ ಯಾರೊಬ್ಬರೂ ನೇರವಾಗಿ ಅದನ್ನು ತಲುಪುವುದು ಸಾಧ್ಯವಿಲ್ಲವೆಂದೂ ಉಳಿದೆರಡು ಹಂತಗಳನ್ನು ದಾಟಿದ ನಂತರವೇ ಆ ಹಂತಕ್ಕೆ ಏರಲು ಸಾಧ್ಯವೆಂದೂ ಹೇಳಿದೆ. ಹಾಗಾಗಿ ಪ್ರತಿಯೊಬ್ಬ ಮನುಷ್ಯನೂ ತನ್ನ ಪಾಲಿಗೆ ಬಂದ ಕರ್ತವ್ಯಗಳನ್ನು ನಿಷ್ಠೆಯಿಂದ ಪಾಲಿಸುವುದು ಎಷ್ಟು ಮುಖ್ಯವೋ ಅಷ್ಟೇ ಶ್ರದ್ಧೆಯೊಂದಿಗೆ ಪರಮಾತ್ಮ ತತ್ತ್ವವನ್ನು ಭಕ್ತಿಯೋಗದ ಮೂಲಕ ತಿಳಿಯುವ ಕಾರ್ಯಕ್ಕೆ ತೊಡಗ ಬೇಕೆಂದೂ ಅದರ ನಂತರವೇ ಮೂರನೆಯ ಹಾಗೂ ಪ್ರಬುದ್ಧತೆಯ 'ಜ್ಞಾನಯೋಗ' ವನ್ನು ಸಾಧಿಸಲು ಸಾಧ್ಯವಾಗುತ್ತದೆಂದು ತಿಳಿಸಿದೆ.

'ಗೀತಾಜಯಂತಿ'ಯನ್ನು ಭಾರತವಲ್ಲದೆ ಹಲವು ದೇಶಗಳಲ್ಲಿಯೂ ಆಚರಿಸುತ್ತಾರೆ. ಕೃಷ್ಣಪಂಥವನ್ನು ಸ್ವಾಮಿ ಪ್ರಭುಪಾದರು ಸ್ಥಾಪಿಸಿದ ನಂತರವಂತೂ ಅವರ ಅನುಯಾಯಿಗಳು ದೇಶದ ಹಾಗೂ ಹೊರದೇಶಗಳಲ್ಲಿಯೂ ಸಾವಿರಾರು ಮಂದಿ ಇರುವುದರಿಂದ ಗೀತಾಜಯಂತಿಯು ಸಂಭ್ರಮದಿಂದ ಎಲ್ಲ ಕಡೆಗಳಲ್ಲಿ ನಡೆಯುತ್ತದೆ. ಭಗವದ್ಗೀತೆಯ ಪಾರಾಯಣ, ವಿದ್ವಾಂಸರ ಜೊತೆಯಲ್ಲಿ ಅದರಲ್ಲಿರುವ ವಿಚಾರಗಳು, ಅವುಗಳ ಪ್ರಸ್ತುತತೆ, ಬದುಕಿನಲ್ಲಿ ಅಳವಡಿಸಿ ಕೊಳ್ಳಬೇಕಾದ ಅಗತ್ಯ ಎಲ್ಲದರ ಕುರಿತು ಚರ್ಚೆ ನಡೆಯುತ್ತದೆ. ಭಕ್ತಿ ಗೀತೆಗಳ ಗಾಯನವೂ ಇರುತ್ತದೆ. ಗೀತೆಯ ಸಂದೇಶಗಳನ್ನು ಮನನ ಮಾಡಿಕೊಳ್ಳುತ್ತ, ಆತ್ಮವಿಶ್ವಾಸ, ಆತ್ಮಬಲಗಳನ್ನು ವೃದ್ಧಿಸಿ ಕೊಳ್ಳುವ ಪ್ರಯತ್ನದೊಂದಿಗೆ ಜೀವನವನ್ನು ಹಸನು ಮಾಡಿಕೊಳ್ಳಲು ಸಿದ್ಧರಾಗುತ್ತಾರೆ.

**ಗೀತಾಶಾಸ್ತ್ರಮಿದಂ ಪುಣ್ಯಂ ಯಃ ಪಠೇತ್ಪ್ರಯತಃ ಪುಮಾನ್ ।**
**ವಿಷ್ಣೋಃ ಪದಮವಾಪ್ನೋತಿ ಭಯಶೋಕಾದಿವರ್ಜಿತಃ ॥**

●

# ರಾಷ್ಟ್ರೀಯ ಕಾರ್ಯಕಾರಿಣಿಯ ವರದಿ

ವರದಿ : **ಶ್ರೀಮತಿ ಮಮತಾ ಡಿ.ಕೆ.**
**ಸಹಕಾರ್ಯದರ್ಶಿ, ಮಹಿಳಾ ವಿಭಾಗ,**
**ABRSM**



"ಮಹಿಳೆಯರ ಸ್ಥಿತಿಗತಿಯ ಆಧಾರದ ಮೇಲೆ ಒಂದು ಸಮಾಜದ ಸ್ಥಿತಿಗತಿಯ ಪರಿಚಯವಾಗುತ್ತದೆ" ಎಂದು ABRSMನ ಸಂರಕ್ಷಕರಾದ ಶ್ರೀ ಅನಿರುದ್ದ ದೇಶಪಾಂಡೆಜೀಯವರು ಇದೇ ಅಕ್ಟೋಬರ್ 27 ರಂದು ಅಮರಾವತಿಯಲ್ಲಿ (ಮಹಾರಾಷ್ಟ್ರ) ನಡೆದ ರಾಷ್ಟ್ರೀಯ ಮಹಿಳಾ ಸಂವರ್ಗದ ಸಭೆಯಲ್ಲಿ ಮಹಿಳೆಯರನ್ನು ಉದ್ದೇಶಿಸಿ ಮಾತನಾಡುತ್ತಾ ತಿಳಿಸಿದರು.

ಮಹಿಳಾ ಸಂವರ್ಗದ ಕಾರ್ಯಕ್ರಮದ ಉದ್ಘಾಟನೆಯನ್ನು ದೀಪ ಬೆಳಗುವುದರೊಂದಿಗೆ ಹಾಗೂ ಸರಸ್ವತಿ ವಂದನೆಯೊಂದಿಗೆ ಪ್ರಾರಂಭ ಮಾಡಲಾಯಿತು. ಉದ್ಘಾಟನಾ ಸಮಾರಂಭದಲ್ಲಿ ABRSMನ ಅಧ್ಯಕ್ಷರಾದ ಡಾ॥ ವಿಮಲ್ ಪ್ರಸಾದ್ ಅಗರ್‌ವಾಲ್ ರವರು, ಸಂರಕ್ಷಕರಾದ ಶ್ರೀ ಅನಿರುದ್ಧ ದೇಶಪಾಂಡೆಯವರು ಉಪಸ್ಥಿತರಿದ್ದರು.

ಮೊದಲನೇ ಅವಧಿಯಲ್ಲಿ 7 ರಾಜ್ಯಗಳಿಂದ ಮಹಿಳಾ ಸಂವರ್ಗದಲ್ಲಿ ಉಪಸ್ಥಿತರಿದ್ದ ಮಹಿಳೆಯರಿಂದ ಕಳೆದ ಕಾರ್ಯಕಾರಿಣಿಯಿಂದ ಇದುವರೆಗೂ ನಡೆದ ಕಾರ್ಯಕ್ರಮಗಳ ವರದಿ ಪಡೆದುಕೊಳ್ಳಲಾಯಿತು.

ಎರಡನೇ ಅವಧಿಯಲ್ಲಿ ಮಹಾರಾಷ್ಟ್ರದ ಕಲ್ಪನಾ ಪಾಂಡೆಯವರು ಹಾಗೂ ಸುಜಾತಾ ಕುಲಕರ್ಣಿಯವರು "ಭಾರತದಲ್ಲಿ ಮಹಿಳೆಯರ ಸ್ಥಾನಮಾನ" ಎಂಬ ವಿಷಯದ ಮೇಲೆ ಅವರು ನಡೆಸುತ್ತಿರುವ ಸಂಶೋಧನೆಯ ಕುರಿತು ವಿವರಣೆ ನೀಡುತ್ತಾ ಅಲ್ಲಿರುವ ಶಿಕ್ಷಕಿಯರಿಂದ ಆ ಬಗ್ಗೆ ತಯಾರಿಸಿರುವ ಪ್ರಶ್ನಮಾಲಿಕೆಯನ್ನು ಭರಿಸುವ ಕಾರ್ಯವನ್ನು ಸಹ ಮಾಡಿದರು. ಅನುಸೂಚಿಗಳನ್ನು ಭರ್ತಿ ಮಾಡುವಾಗ ಬಂದ ಅನೇಕ ಸಂದೇಹಗಳನ್ನು ಶಿಕ್ಷಕಿಯರು ಸಭೆಯಲ್ಲಿ ಬಗೆಹರಿಸಿಕೊಂಡರು.

ಮಹಿಳಾ ಸಂವರ್ಗದ ಸಮಾರೋಪ ಸಮಾರಂಭದಲ್ಲಿ ABRSM ಅಧ್ಯಕ್ಷರಾದ ಡಾ॥ ವಿಮಲ್ ಪ್ರಸಾದ್ ಅಗರ್‌ವಾಲ್ ರವರು ABRSM ನ ಸ್ಥಾಪನೆ, ಕಾರ್ಯವೈಖರಿಯನ್ನು ಪರಿಚಯಿಸುತ್ತಾ ಸಂಘಟನೆಯಲ್ಲಿ ಮಹಿಳಾ ಸಂವರ್ಗ ವಿಸ್ತಾರವಾಗಬೇಕೆಂದು ತಿಳಿಸಿದರು. ಸುಧಾ ಶರ್ಮಾರವರು ಸಭೆಯಲ್ಲಿ ಉಪಸ್ಥಿತರಿರುವರೆಲ್ಲರಿಗೂ ಧನ್ಯವಾದ ಅರ್ಪಿಸುತ್ತಾ ಶಾಂತಿ ಮಂತ್ರದೊಂದಿಗೆ ಅಂದಿನ ಮಹಿಳಾ ಸಂವರ್ಗ ಮುಕ್ತಾಯವಾಯಿತು.

ದಿನಾಂಕ 28.10.17 ರಂದು ಸರಸ್ವತಿ ವಂದನೆ ಹಾಗೂ ದೀಪ ಬೆಳಗುವುದರೊಂದಿಗೆ ABRSM ರಾಷ್ಟ್ರೀಯ ಕಾರ್ಯಕಾರಿಣಿ ಪ್ರಾರಂಭವಾಯಿತು. ಡಾ॥ ವಿಮಲ್ ಪ್ರಸಾದ್ ಅಗರ್‌ವಾಲ್‌ರವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ಮಹಾರಾಷ್ಟ್ರ ಸರ್ಕಾರದಲ್ಲಿ ಅಮರಾವತಿ ಜಿಲ್ಲೆಯ ಉಸ್ತುವಾರಿ ಸಚಿವರಾದ ಶ್ರೀ ನಾಮಧಾರಿ ಪ್ರವೀಣ್‌ರವರು ಹಾಗೂ ಅಮರಾವತಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ॥ ಮುರಳೀಧರ ಚಾಂದೇಕರ್‌ರವರು ಅತಿಥಿಗಳಾಗಿ ಆಗಮಿಸಿದ್ದರು. ABRSM ಮಹಾಮಂತ್ರಿಗಳಾದ ಶ್ರೀ ಜೆ.ಪಿ.ಸಿಂಘಾಲ್‌ರವರು ABRSM ನ ಕಾರ್ಯವೈಖರಿಯ ಬಗ್ಗೆ ತಿಳಿಸುತ್ತಾ ಸಂಘಟನೆ 24 ರಾಜ್ಯಗಳಲ್ಲಿ ಸಕ್ರಿಯವಾಗಿ ಭಾರತೀಯತೆಯ ದೃಷ್ಟಿಕೋನವನ್ನಿಟ್ಟುಕೊಂಡು ಶಿಕ್ಷಣ, ಶಿಕ್ಷಕ ಮತ್ತು ಸಮಾಜದ ಹಿತದಲ್ಲಿ ಕೆಲಸ ಮಾಡುತ್ತಿದೆಯೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ ನಾಮದರಿ ಪ್ರವೀಣ್ ಕೋಟೆಯವರು ಭಾರತವನ್ನು ಮಹಾಶಕ್ತಿಯನ್ನಾಗಿ ಮಾಡುವಲ್ಲಿ ಭಾರತೀಯ ಶಿಕ್ಷಕರ ಸ್ಥಾನ ಮಹತ್ವಪೂರ್ಣವಾದುದಾಗಿದೆ ಎಂದು ತಿಳಿಸಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಡಾ॥ ವಿಮಲ್ ಪ್ರಸಾದ್ ಅಗರ್‌ವಾಲ್‌ಜೀಯವರು ಸಂಘಟನೆಯಲ್ಲಿ ಇದುವರೆಗೂ ಸಾಮಾನ್ಯ ಕಾರ್ಯಕರ್ತರಾಗಿದ್ದವರು ಇಂದು ಮಹಾವಿದ್ಯಾಲಯದ ಕುಲಗುರುಗಳಾಗಿದ್ದಾರೆ. ಇದರಿಂದಲೇ ಈ ಸಂಘಟನೆಯ ಶಕ್ತಿ ವ್ಯಕ್ತವಾಗುತ್ತದೆ. ಮಹಿಳೆಯರಲ್ಲೂ ನಾಯಕತ್ವದ ವಿಕಾಸವಾಗಬೇಕೆಂಬ ಕಿವಿ ಮಾತನ್ನು ಹೇಳಿದರು.

ನಂತರದ ಅವಧಿಯಲ್ಲಿ ಚಾರ್ಟೆಡ್ ಅಕೌಂಟೆಂಟ್ ಆಗಿರುವ ಸಾಂಕಲಚಂದ್ ಬಾಗರೀಚರವರು ಒಂದು ಸಂಘಟನೆಯನ್ನು ಅಥವಾ ಚಾರಿಟೆಬಲ್ ಟ್ರಸ್ಟ್‌ನ್ನು ನಡೆಸುವಾಗ ತಿಳಿದುಕೊಂಡಿರಬೇಕಾದ ಕರ ಕಾನೂನಿನ ಬಗ್ಗೆ ವಿಸ್ತೃತವಾದ ವಿವರಣೆಯನ್ನು ನೀಡಿದರು. ಆಡಿಟ್ ( Audit ) ಮಾಡಿಸುವಾಗ ಪ್ರಾಕ್ಟೀಸ್‌ನಲ್ಲಿರುವ CA ರವರಿಂದಲೇ ಮಾಡಿಸಬೇಕೆಂದು ತಿಳಿಸಿದರು. ಸಂಘಟನೆಯಲ್ಲಿ Audit ನ್ನು ಹೇಗೆ ನಿರ್ವಹಿಸಬೇಕೆಂಬುದರ ಬಗ್ಗೆಯೂ ತಿಳಿಸುತ್ತಾ, ಅನೇಕರ ಸಂದೇಹಗಳನ್ನು ಸಹ ನಿವಾರಿಸುವ ಪ್ರಯತ್ನವನ್ನು ಮಾಡಿದರು.

ಮಧ್ಯಾಹ್ನದ ಅವಧಿಯಲ್ಲಿ ಪ್ರತಿರಾಜ್ಯದಿಂದ ಒಬ್ಬೊಬ್ಬ ಪ್ರಮುಖರು ತಮ್ಮ ರಾಜ್ಯದಲ್ಲಿ ಆಗಿರುವ ಕಾರ್ಯಗಳ ಬಗ್ಗೆ ಕಾರ್ಯಕಾರಿಣಿ ಸಭೆಗೆ ಮಾಹಿತಿ ನೀಡಿದರು. ಅದರಲ್ಲಿ ಪ್ರಮುಖವೆಂದರೆ ಜಮ್ಮು ಮತ್ತು ಕಾಶ್ಮೀರದ ಹೊಸ ಮತ್ತು ಹಳೆ ಕಾರ್ಯಕರ್ತರ ನಡುವೆ ಸಮನ್ವಯ ಮಾಡುವ ಕಾರ್ಯ, ರಾಜಸ್ಥಾನದಲ್ಲಿ ಇಡೀ ವರ್ಷದ ಕೆಲಸದ ಕ್ಯಾಲೆಂಡರ್ ತಯಾರಿಸಿರುವುದು, ಸಮರಸ್ ಕಾ ದಿವಸ್, ಜಲಸಂರಕ್ಷಣ

**ಪುಟ 10 ಕ್ಕೆ ➤**

ಶಿಕ್ಷಣ ಸೌರಭ

# ಕೊಠಾರಿ ಶಿಕ್ಷಣ ಆಯೋಗ

**ವಿ. ರಾಜ**
**ಶಿಕ್ಷಣ ಪ್ರಕೋಷ್ಠ ಪ್ರಮುಖ್**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**



ಮಗುವಿನಲ್ಲಿ ಸರ್ವಾಂಗೀಣ ಅಭಿವೃದ್ಧಿಯನ್ನು ಉಂಟುಮಾಡುವುದೇ ಶಿಕ್ಷಣದ ಉದ್ದೇಶವಾಗಿದೆ. ಆದರೆ ಅದು ಇಂದು ಮರೀಚಿಕೆಯಂತಾಗಿದೆ. ಇದಕ್ಕಾಗಿ ಹಲವಾರು ಶಿಕ್ಷಣ ಆಯೋಗಗಳನ್ನು ರಚಿಸಿದರು. ಅವುಗಳಲ್ಲಿ ಕೊಠಾರಿ ಶಿಕ್ಷಣ ಆಯೋಗವು ಪ್ರಮುಖವೆನಿಸಿದೆ. ಶಿಕ್ಷಣ ವ್ಯವಸ್ಥೆಯನ್ನು ಉತ್ತಮಪಡಿಸುವ ಉದ್ದೇಶದಿಂದ ಕೇಂದ್ರಸರ್ಕಾರವು 1964ರಲ್ಲಿ ಡಾ. ಎಸ್. ಕೊಠಾರಿಯವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ನೇಮಿಸಿತು. ಈ ಆಯೋಗವನ್ನು ಕೊಠಾರಿ ಶಿಕ್ಷಣ ಆಯೋಗ ಅಥವಾ ಭಾರತೀಯ ಶಿಕ್ಷಣ ಆಯೋಗವೆಂತಲೂ ಕರೆಯುತ್ತಾರೆ. ಈ ಆಯೋಗವು ಪೂರ್ವ ಪ್ರಾಥಮಿಕ ಹಂತದಿಂದ ಉನ್ನತ ಹಂತದವರೆಗೆ ಕೂಲಂಕಷವಾಗಿ ಅಧ್ಯಯನ ಮಾಡಿ ಹಲವು ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು 1966ರಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು.

ಇಡೀ ಶಿಕ್ಷಣ ವ್ಯವಸ್ಥೆಯನ್ನು ಪ್ರಸ್ತುತತೆಗೆ ತಕ್ಕಂತೆ ಪುನರ್ರಚಿಸುವುದು ಅನಿವಾರ್ಯವಾಗಿದೆ ಎಂದು ಈ ಆಯೋಗವು ಶಿಫಾರಸ್ಸು ಮಾಡಿತು. ಭಾರತದ ಭವಿಷ್ಯವು ನಾಲ್ಕು ಗೋಡೆಗಳ ಮಧ್ಯೆ ಅಡಗಿರುವುದರಿಂದ ಅದಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸಬೇಕಾಗಿದೆ. ಆಗ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟಿದೆ.

ಪ್ರೌಢ ಶಿಕ್ಷಣವನ್ನು ಕುರಿತಂತೆ ಈ ಆಯೋಗವು ಹಲವಾರು ಶಿಫಾರಸ್ಸುಗಳನ್ನು ಮಾಡಿದೆ. ಶಿಕ್ಷಣ ಮತ್ತು ಉತ್ಪಾದನೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದು ಮತ್ತೊಂದಕ್ಕೆ ಸದಾ ಪೋಷಕ ಮತ್ತು ಪೂರಕವಾಗಿರುತ್ತದೆ. ಶಿಕ್ಷಣ ನೀಡುವ ಮೂಲಕ ವಿದ್ಯಾರ್ಥಿಗಳು ವಿವಿಧ ಉತ್ಪಾದನಾ ಚಟುವಟಿಕೆಗಳಲ್ಲಿ ಭಾಗವಹಿಸಿ ತನ್ಮೂಲಕ ತಲಾ ಆದಾಯ ಮತ್ತು ರಾಷ್ಟ್ರೀಯ ಆದಾಯವನ್ನು ಹೆಚ್ಚಿಸಲು ನೆರವಾಗುತ್ತಾರೆ. ಇವೆರಡರ ಸಂಬಂಧವನ್ನು ಗಟ್ಟಿಗೊಳಿಸಲು ಶಾಲೆಗಳಲ್ಲಿ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಬೇಕೆಂದು ಆಯೋಗವು ಸೂಚಿಸಿದೆ. ಇದಕ್ಕಾಗಿ ಶಿಕ್ಷಣದ ಎಲ್ಲ ಹಂತಗಳಲ್ಲೂ ವಿಜ್ಞಾನ ಶಿಕ್ಷಣವನ್ನು ಬೋಧಿಸುವುದು ಅವಶ್ಯವಾಗಿದೆ. ಎಲ್ಲ ವಿದ್ಯಾರ್ಥಿಗಳಲ್ಲಿ ಅನ್ವೇಷಣಾ ಮತ್ತು ಪ್ರಾಯೋಗಿಕ ಮನೋಭಾವವನ್ನು ಬೆಳೆಸುವುದು, ಕಾರ್ಯಾನುಭವವನ್ನು ಶಿಕ್ಷಣದ ಅವಿಭಾಜ್ಯ ಅಂಗವನ್ನಾಗಿಸುವುದು, ವಿದಾರ್ಥಿಗಳಲ್ಲಿ ಶ್ರಮ ಗೌರವವನ್ನು ಹೆಚ್ಚಿಸುವುದು, ಪ್ರೌಢ ಹಂತದಲ್ಲಿ ಕೃಷಿ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡುವುದು, ಸಾಮಾನ್ಯ ಶಿಕ್ಷಣದ ಜೊತೆಗೆ ವೃತ್ತಿಪರ ಶಿಕ್ಷಣ ನೀಡುವುದು, ಆರ್ಥಿಕ ಭದ್ರತೆಗೆ ಪೂರಕವಾಗುವಂತಹ ವಿಷಯಗಳನ್ನು ಬೋಧಿಸುವುದು, ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಕ್ರಮ ಕೈಗೊಳ್ಳುವುದರ ಮೂಲಕ ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡಬೇಕೆಂದು ಆಯೋಗವು ಸೂಚಿಸಿತು.

ಶಿಕ್ಷಣದ ಮೂಲಕ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಮತ್ತು ರಾಷ್ಟ್ರೀಯ ಏಕತೆಯನ್ನುಂಟುಮಾಡುವ ಕಾರ್ಯವನ್ನು ಮಾಡಬೇಕಾಗಿದೆ ಎಂದು ತಿಳಿಸಿತು. ಏಕೆಂದರೆ ವಿದ್ಯಾರ್ಥಿಗಳಲ್ಲಿ ರಾಷ್ಟ್ರದ ಭವಿಷ್ಯತ್ತಿನ ಬಗ್ಗೆ ಅಚಲವಾದ ವಿಶ್ವಾಸವನ್ನು ಬಿತ್ತಬೇಕಾಗಿದೆ. ಜೀವನ ಮಟ್ಟದಲ್ಲಿ ಏರಿಕೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಹೇಳಬೇಕಾಗಿದೆ, ಮೌಲ್ಯಗಳ ಬಗ್ಗೆ ಆಳವಾದ ಪ್ರಜ್ಞೆಯನ್ನು ಮೂಡಿಸಬೇಕಾಗಿದೆ, ಪೌರತ್ವದ ಬಗ್ಗೆ ಕಲ್ಪನೆಯನ್ನು ಬೆಳೆಸಬೇಕಾಗಿದೆ, ಪರಸ್ಪರ ತಿಳುವಳಿಕೆಯನ್ನು ಉಂಟು ಮಾಡಬೇಕಾಗಿದೆ, ನಮ್ಮ ದೇಶದ ಸಂಸ್ಕೃತಿ ಮತ್ತು ಸಂಪ್ರದಾಯಗಳಿಗೆ ವಿಧೇಯರಾಗಿ ವರ್ತಿಸುವುದನ್ನು ತಿಳಿಸಬೇಕಾಗಿದೆ. ಆ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಮಧುರವಾದ ಬಾಂಧವ್ಯವನ್ನು ಉಂಟುಮಾಡಬೇಕಾಗಿದೆ ಎಂದು ತಿಳಿಸಲಾಗಿದೆ.

ವಿದ್ಯಾರ್ಥಿಗಳನ್ನು ವಿವಿಧ ಸಾಮಾಜಿಕ ಹಾಗೂ ರಾಷ್ಟ್ರೀಯ ಸೇವೆಗಳಲ್ಲಿ ತೊಡಗಿಸುವಂತೆ ಪ್ರೇರೇಪಿಸಬೇಕೆಂದು ತಿಳಿಸಿದೆ. ಶಿಕ್ಷಣದ ಎಲ್ಲ ಹಂತಗಳಲ್ಲಿ ಸಾಮಾಜಿಕ ಮತ್ತು ರಾಷ್ಟ್ರೀಯ ಸೇವೆಗಳನ್ನು ಕಡ್ಡಾಯವಾಗಿ ಬೋಧಿಸುವುದು, ಅವರನ್ನು ಸಾಮುದಾಯಿಕ ಜೀವನ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೇರೇಪಿಸುವುದು, ಸುಶಿಕ್ಷಿತ ಮತ್ತು ಅಶಿಕ್ಷಿತರ ನಡುವಿನ ಕಂದಕವನ್ನು ಕಡಿಮೆ ಮಾಡುವುದು, ಪ್ರತಿಯೊಬ್ಬರಲ್ಲೂ ಸೇವಾ ಮನೋಭಾವವನ್ನು ಉಂಟುಮಾಡುವುದು, ಎನ್ ಸಿ ಸಿ , ಎನ್.ಎಸ್.ಎಸ್ , ಸ್ಕೌಟ್, ಗೈಡ್ಸ್‌ಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವುದು ಮುಂತಾದ ಶಿಫಾರಸ್ಸನ್ನು ಮಾಡಲಾಗಿದೆ.

ಶಿಕ್ಷಣದ ಮೂಲಕ ಆಧುನೀಕರಣವನ್ನು ಸಾಧಿಸಲು ಅನುಕೂಲವಾಗುವ ವಾತಾವರಣವನ್ನು ಸೃಷ್ಟಿಸುವುದು, ಶಿಕ್ಷಣದ ಅವಿಭಾಜ್ಯ ಅಂಗವಾಗಿ ವಿಜ್ಞಾನ ಆಧಾರಿತ ಶಿಕ್ಷಣವನ್ನು ಎಲ್ಲ ಹಂತಗಳಲ್ಲಿ ನೀಡುವುದು, ತಂತ್ರಜ್ಞಾನದ ಬಳಕೆಗೆ ಒತ್ತುನೀಡುವುದು, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಬದಲಾವಣೆಯನ್ನು ತರುವುದು, ವಿದ್ಯಾರ್ಥಿಗಳಲ್ಲಿ ಆಸಕ್ತಿ, ಕುತೂಹಲ, ಧನಾತ್ಮಕ ಮನೋಭಾವ, ಸ್ವ- ಅಧ್ಯಯನ, ತಾರ್ಕಿಕವಾಗಿ ಆಲೋಚಿಸುವ ಮತ್ತು ಸೂಕ್ತವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯಗಳನ್ನು ಬೆಳೆಸಬೇಕಾಗಿದೆ ಎಂದು ತಿಳಿಸಲಾಗಿದೆ.

**ಪುಟ 10 ಕ್ಕೆ ➤**

# ಬುದ್ಧ ಬೆಳಕು

ಕಾಳಕತ್ತಲೆಯ ಮಧ್ಯರಾತ್ರಿಯಲೆದ್ದು
ಹೊರಟೆಲ್ಲಿಗೆ ನಿಂತೆ ಸಿದ್ಧಾರ್ಥ ?
ದೇಹ ನಶ್ವರವೆಂಬ ತಾತ್ಸಾರವೆ ?
ಮನುಕುಲಕೆ ಬೆಳಕಾಗುವ ಉತ್ಸುಕವೆ ?
ಹೌದು ! ನೀನೆದ್ದುದರಲಿ ಆಶ್ಚರ್ಯವಿಲ್ಲ !

ಹಿಂದು ಧರ್ಮದಲ್ಲಿತ್ತು ಅಂದು ಅಂಧಕಾರ
ಪುರೋಹಿತಶಾಹಿ ವರ್ಗದವರ ದುರಹಂಕಾರ
ಅರ್ಪಿಸಲಾಗುತ್ತಿತ್ತು ಯಜ್ಞಕ್ಕೆ ; ಪ್ರಾಣಿಗಳ ಸಹಸ್ರ ಶಿರ
ಹಾಕಿದೆ ಮನನೊಂದು ನೀ ಇದಕೆ ಬಹಿಷ್ಕಾರ

ಜೀವನ ದುಃಖಮಯವಾಗಿಯೆಂದೆ
ಅದಕೆ ಕಾರಣ ಆಸೆಯೆಂದೆ
ದೇಹದಂಡನೆ ಕಠಿಣ ವ್ರತಗೈದು
ಬೋಧಿವೃಕ್ಷದಡಿ ದಿವ್ಯಜ್ಞಾನವ ಪಡೆದೆ

ಜನರಾಡುವ ಭಾಷೆಯಲಿ ತತ್ವ ಸಾರಿದೆ
ಜಾತಿ ಭೇದ ಬಲವಾಗಿ ಖಂಡಿಸಿದೆ
ಮೇಲು ಕೀಳು ಅಲ್ಲಗಳೆದು
ಹಾಳು ಮೌಢ್ಯಗಳ ದೂರ ತಳ್ಳಿದೆ

ತಿದ್ದಲಾರದ ಹೃದಯಗಳ
ತಿದ್ದಿದ ಮಹಾನುಭಾವ ನೀ
ಅಂಗುಲಿಮಾಲನಂಥ ಕ್ರೂರಿಗೂ
ತಾಯ್ಮಡಿಲ ತೋರಿದ ಕರುಣಾಮಯಿ ನೀ

ಅಶೋಕ ಹರ್ಷ ಕನಿಷ್ಕ
ಪ್ರಚಾರಗೈದರು ನಿನ್ನ ತತ್ವ
ರಾಜಾಶ್ರಯ ದೊರೆಯಿತು ಅಪಾರ
ನಿನ್ನ ನಂಬಿದರು ಭರಪೂರ

ವಿಷ್ಣು ಅವತಾರವೆಂದಿತು ಹಿಂದು ಧರ್ಮ
ಜಗದೆಲ್ಲೆಡೆ ಪಸರಿಸಲಿ ವಿಶ್ವಧರ್ಮ
ನಿನ್ನ ಕರುಣೆ ನಮಗೆ ಇರಲಿ
ನಿನ್ನ ಕರುಣೆ ನಮಗೆ ಬರಲಿ

ಬುದ್ಧಂ ಶರಣಂ ಗಚ್ಛಾಮಿ
ಧರ್ಮಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ
ಪ್ರೇಮಂ ಶರಣಂ ಗಚ್ಛಾಮಿ

– ರವಿ ಬಿ. ಹಾದಿಮನಿ, ಶಿಕ್ಷಕರು
ಹುನಗುಂದ, ಬಾಗಲಕೋಟ ಜಿಲ್ಲಾ

# ಹಿರಿಯಜೀವಿ



ಗೂನು ಬೆನ್ನು !
ನಿಸ್ತೇಜ ನೇತ್ರ !
ಅಡಿಗಡಿಗೆ ನಡಗುವ ನಿಸ್ಸತ್ವ
ಕಾಲ್ಗಳಭಾರ ಕೋಲ ಮೇಲೆ!

ನಡೆಕೂಡ ಮುಂದಡಿಯಿಡಲು
ಬಿಡದೆ ನಡಗುವ
ಕೋಲಿಡಿದ ಕೈಗಳು!
ಅಸ್ತವ್ಯಸ್ತ ಬೆಳ್ಗೂದಲಿಂದ
ಕಪ್ಪಿಲ್ಲದ ನೆರೆ!

ತೊದಲ್ವ ನಾಲಗೆಯಿಂದ
ಏನೊಂದು ಅರ್ಥವಾಗದ ಮಾತುಗಳು!
ಸೋರ್ವಜೊಲ್ಲು! ಬೊಚ್ಚುಬಾಯಿ!
ಬದುಕುವ ಭರವಸೆ,

ಬತ್ತದ ಜೀವನೋತ್ಸಾಹ
ಕಳೆದುಕೊಳ್ಳದ ಹಿರಿಯಜೀವಿ !
ಸಣ್ಣಪುಟ್ಟ ಹೆಜ್ಜೆಹಾಕ್ತ !
ನೊಸಲಮೇಲೆ ಕೈನೂಕ್ತ !

ಅರೆಗಳಿಗೆಗೊಮ್ಮೆ ನಿಂತುನೋಡ್ತಾ !
ಒಂಟಿಯಾಗಿ ದಾರಿಗುಂಟ ಹೊಂಟಿದೆ !
ಮುನ್ನಡೆಯುತ ದೃಷ್ಟಿಯಲ್ಲೋ ನೆಟ್ಟಿದೆ !

ಜಗದೀಶ ಬಿ. ಹಾದಿಮನಿ
ಉಪನ್ಯಾಸಕರು, ಹುನಗುಂದ

"ಒಬ್ಬ ವ್ಯಕ್ತಿ ಏನೂ ಕೆಲಸ ಮಾಡದೆ ಇದ್ದರೆ, ಅವನ ಮನಸ್ಸು ಸರಿಯಾಗಿರಲು ಹೇಗೆ ಸಾಧ್ಯ ? ದಿನದ 24 ಗಂಟೆಯೂ ಧ್ಯಾನ – ಚಿಂತನೆಗಳಲ್ಲಿ ತೊಡಗಿರಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಕೆಲಸ ಮಾಡಲೇ ಬೇಕು. ಇದರಿಂದ ಮನಸ್ಸು ಲವಲವಿಕೆಯಿಂದ ಇರುತ್ತದೆ."

"ನಿನಗೇನಾದರೂ ಶಾಂತಿ ಬೇಕಿದ್ದರೆ ಯಾರ ದೋಷವನ್ನೂ ನೋಡಬೇಡ. ಅದರ ಬದಲು ನಿನ್ನ ದೋಷವನ್ನೇ ನೋಡಿಕೋ. ಇಡೀ ಜಗತ್ತನ್ನೇ ನಿನ್ನದನ್ನಾಗಿ ಮಾಡಿಕೊಳ್ಳಲು ಕಲಿ."

– ಶ್ರೀಮಾತಾ ಶಾರದಾದೇವಿ

ಭೂರಮೆ

# ಶ್ರೀಮಾತಾ ಶಾರದಾದೇವಿ



**"ನೀನು ಪ್ರೀತಿಸುವವರಿಂದ ಏನನ್ನೂ ಬಲವಂತವಾಗಿ ನಿರೀಕ್ಷಿಸಬೇಡ. ಹಾಗೆ ಮಾಡಿದರೆ ಕೆಲವರು ಹೆಚ್ಚು ಕೊಡಬಹುದು. ಕೆಲವರು ಕಡಿಮೆ ಕೊಡಬಹುದು. ಹಾಗಾದಾಗ ಸಹಜವಾಗಿಯೇ ಅಥವಾ ಅನುದ್ದೇಶಪೂರ್ವಕವಾಗಿಯೇ ಹೆಚ್ಚು ನೀಡಿದವರನ್ನೂ ನೀನು ಹೆಚ್ಚು ಪ್ರೀತಿಸಬಹುದು. ಆಗ, ನೀನು ನೀಡುವ ಪ್ರೀತಿ ಸಮಾನವಾಗಿರುವುದಿಲ್ಲ, ನಿಷ್ಪಕ್ಷಪಾತವಾಗಿರುವುದಿಲ್ಲ."**

**"ಮನುಷ್ಯನ ಸಹಜ ಗುಣಗಳಲ್ಲಿ ಮತ್ತೊಬ್ಬರಲ್ಲಿ ತಪ್ಪನ್ನು ಹುಡುಕುವುದು ಒಂದು ಮುಖ್ಯವಾದ ಗುಣವಾಗಿರುತ್ತದೆ. ಆದರೆ, ತಪ್ಪು ಮಾಡುವುದು ಮನುಷ್ಯನ ಸಹಜ ಗುಣವೆಂಬುದನ್ನು ನೆನಪಿಟ್ಟುಕೊಂಡು ಮತ್ತೊಬ್ಬರಲ್ಲಿ ಒಳ್ಳೆಯ ಅಂಶವನ್ನು ಗುರುತಿಸಿ ಮೆಚ್ಚುವುದನ್ನು ಕಲಿತುಕೊ. ನೀನು ತಪ್ಪುಗಳನ್ನೇ ಹುಡುಕುತ್ತ ಹೋದರೆ, ನಿನಗೆ ಕೇವಲ ಅವುಗಳೇ ಕಾಣುತ್ತವೆ".**

**ಸಹನಾ,** ಬೆಂಗಳೂರು

**ಈ** ಅಮೂಲ್ಯವಾದ ವಿಚಾರಗಳನ್ನು ಉಪದೇಶಿಸಿದರೂ ಯಾವುದೇ ಶಾಲಾ ಶಿಕ್ಷಣವನ್ನು ಪಡೆದವರಲ್ಲ. ಹುಟ್ಟಿದ್ದು ಬೆಳೆದದ್ದು ಎಲ್ಲವೂ ಅತ್ಯಂತ ಗ್ರಾಮೀಣ ಪ್ರದೇಶದ ಪರಿಸರದಲ್ಲಿ. ಆದರೆ ಸ್ವಾಧ್ಯಾಯ ಮಾಡುತ್ತಲೇ ತಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಂಡದ್ದಲ್ಲದೆ ಲಕ್ಷಾಂತರ ಮಂದಿಗೆ ಮಾತೃ ವಾತ್ಸಲ್ಯದ ಹೊಳೆಯನ್ನೇ ಹರಿಸಿ 'ಶ್ರೀಮಾತಾ' ಎನಿಸಿಕೊಂಡರು. ಅವರೇ ಹತ್ತೊಂಬತ್ತನೇ ಶತಮಾನದ ಸಂತ ಶ್ರೀರಾಮಕೃಷ್ಣಪರಮಹಂಸರ ಪತ್ನಿಯಾದ ಶ್ರೀಮಾತಾ ಶಾರದಾದೇವಿ. ಲೌಕಿಕವಾಗಿ ಪತ್ನಿ ಎನಿಸಿಕೊಂಡಿದ್ದರೂ ಪರಸ್ಪರರನ್ನು ಅರ್ಥಮಾಡಿಕೊಂಡದ್ದರ ಫಲವಾಗಿ ಪತಿಯ ಅಪೇಕ್ಷೆಯಂತೆ ಆಧ್ಯಾತ್ಮಿಕ ಸಹಚರಿ ಎನಿಸಿಕೊಂಡದ್ದಲ್ಲದೆ ಅವರಿಗಿಂತಲೂ ಉನ್ನತ ಮಟ್ಟದ ಆಧ್ಯಾತ್ಮಿಕ ನೆಲೆಯನ್ನು ತಲುಪಿದರು.

ಬಾಲ್ಯದಿಂದಲೇ ಮನೆಯಲ್ಲಿ ದೊರೆತ ಸಂಸ್ಕಾರ ಅವರ ವ್ಯಕ್ತಿತ್ವಕ್ಕೆ ಉತ್ತಮ, ಭದ್ರ ತಳಪಾಯವನ್ನು ನೀಡಿತ್ತು. ಶಾಲೆಗೆ ಹೋಗಿ ಕಲಿಯುವ ಅವಕಾಶ ಅವರಿಗೆ ಒದಗಲಿಲ್ಲ. ಆದರೆ, ಮಾನವೀಯ ಮೌಲ್ಯಗಳ ಪಾಠವನ್ನು ದೈನಂದಿನ ಜೀವನಕ್ರಮದ ಚಟುವಟಿಕೆಗಳೊಂದಿಗೇ ಕಲಿಯುತ್ತ ಬೆಳೆದರು. ಮನೆಯಲ್ಲಿ ತಾಯಿಗೆ ನೆರವಾಗುತ್ತ ತುಂಬು ಕುಟುಂಬದ ನಿರ್ವಹಣೆಯ ಕಾರ್ಯದಲ್ಲಿ ಸಹಕರಿಸುತ್ತಿದ್ದದಲ್ಲದೆ 1864ರಲ್ಲಿ ಬಂಗಾಳದಲ್ಲಿ ಭೀಕರ ಕ್ಷಾಮವು ತಲೆದೋರಿದ್ದಾಗ ಮನೆಯವರೊಂದಿಗೆ ಬರಪೀಡಿತರಿಗೆ ಸಹಾಯ ಮಾಡಲು ಶ್ರಮಿಸಿದ್ದರು. ಈ ಎಲ್ಲ ಚಟುವಟಿಕೆಗಳನ್ನು ನಡೆಸಿದ್ದು ಬಾಲ್ಯದಲ್ಲಿಯೇ. ಐದನೇ ವಯಸ್ಸಿಗೇ ವಿವಾಹವಾಗಿದ್ದು ಇಪ್ಪತ್ಮೂರರ ರಾಮಕೃಷ್ಣರನ್ನು. ನಂತರ ಪತಿಯನ್ನು ಕಂಡದ್ದು ಹದಿನೆಂಟು ವಯಸ್ಸಿನ ನಂತರ. ಪರಮಹಂಸರಾಗಿದ್ದ ಪತಿಯ ಆಧ್ಯಾತ್ಮಿಕ ಚಿಂತನೆಗಳನ್ನು ಅರ್ಥಮಾಡಿಕೊಂಡ ಶಾರದಾದೇವಿ ಅವರ ದಾರಿಯಲ್ಲಿಯೇ ನಡೆಯಲು ನಿರ್ಧರಿಸಿದ್ದರು. 1872ರಲ್ಲಿ ಕಾಳೀಪೂಜೆಯ ದಿನ ರಾಮಕೃಷ್ಣರು ಶಾರದಾದೇವಿಯನ್ನು ವಿಧಿವತ್ತಾದ ಆಚರಣೆಯೊಂದಿಗೆ 'ಮಾತೆ' ಯನ್ನಾಗಿ (ಆಧ್ಯಾತ್ಮ ಸಾಧನೆಗೆ ದಾರಿ ತೋರುವ) ಸ್ವೀಕರಿಸಿದ್ದರು. ಆಕೆಯಲ್ಲಿ ಸುಪ್ತವಾಗಿದ್ದ ವಿಶ್ವಮಾತೆಯಾಗುವ ಚೈತನ್ಯವನ್ನು ಜಾಗೃತಗೊಳಿಸಿದ್ದರು. ರಾಮಕೃಷ್ಣರ ಶಿಷ್ಯರ ಸಂಪರ್ಕವಾದಂತೆಲ್ಲಾ ಶ್ರೀಮಾತೆ ಅವರೆಲ್ಲರೊಂದಿಗೆ ತಮ್ಮ ಮಾತೃವಾತ್ಸಲ್ಯವನ್ನು ಹಂಚಿಕೊಂಡರು.

ಎಲ್ಲ ಸಂಸ್ಕಾರಗಳ ಫಲವಾಗಿ ಶ್ರೀಮಾತೆಯವರಲ್ಲಿನ ವೈಚಾರಿಕತೆ ಪ್ರಖರವಾಗಿಯೇ ಇತ್ತು. ಮಹಿಳೆಯರು ಶಿಕ್ಷಣವನ್ನು ಕಡ್ಡಾಯವಾಗಿ ಪಡೆಯಬೇಕೆಂಬುದರಲ್ಲಿ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಹೊಂದಿರಬೇಕೆಂಬುದರಲ್ಲಿ ಅವರು ದೃಢವಾದ ವಿಶ್ವಾಸವನ್ನು ಹೊಂದಿದ್ದರು. ಸಕಲ ಜೀವಿಗಳಲ್ಲಿಯೂ ಪ್ರೀತಿಯನ್ನು ತೋರುತ್ತಿದ್ದ ಆಕೆ ಅಕ್ಷರಶಃ ವಿಶ್ವಮಾತೆಯೇ ಆಗಿದ್ದರು. ಸಾಂಪ್ರದಾಯಿಕ ಕುಟುಂಬದಲ್ಲಿಯೇ ಹುಟ್ಟಿ ಬೆಳೆದಿದ್ದರೂ ಆಕೆಯಲ್ಲಿ ಜಾತಿ, ವರ್ಗ ಭೇದಗಳ ಯಾವ ಸಂಕುಚಿತ ಭಾವನೆಯೂ ಇರಲಿಲ್ಲ. ಮೌಲ್ಯಗಳಿಗೆ ಬೆಲೆ ಕೊಡುತ್ತಿದ್ದ ಆಕೆ ತನ್ನಲ್ಲಿಗೆ ಬರುತ್ತಿದ್ದ ಪ್ರತಿಯೊಬ್ಬರನ್ನೂ ಮಾತೃವಾತ್ಸಲ್ಯ ದೊಂದಿಗೆ ಬರಮಾಡಿಕೊಳ್ಳುತ್ತಿದ್ದರು. ಈ ಸೌಭಾಗ್ಯವನ್ನು ಹಂಚಿಕೊಂಡವರಲ್ಲಿ ವಿದೇಶೀ ಮಹಿಳೆಯರೂ ಸೇರಿದ್ದುದು ಅಚ್ಚರಿಯ ವಿಷಯವಾಗಿರಲಿಲ್ಲ. ಸೋದರಿ ನಿವೇದಿತಾರನ್ನು ಪ್ರಿಯಪುತ್ರಿಯಂತೆ ತಮ್ಮಲ್ಲಿಗೆ ಬರಮಾಡಿಕೊಂಡಿದ್ದರು. ಆ ದಿನಗಳಲ್ಲಿ ಸಮಾಜದಲ್ಲಿ ಪ್ರಚಲಿತವಾಗಿದ್ದ ಅತಿಯಾದ ಮಡಿವಂತಿಕೆಯಿಂದ ವಿದೇಶೀ ಜನರನ್ನು ಭಿನ್ನದೃಷ್ಟಿಯಿಂದ ನೋಡುತ್ತಿದ್ದ ಸಮಾಜವನ್ನು ಆಕೆ ಲೆಕ್ಕಿಸಿರಲಿಲ್ಲ.

ಆಕೆಯ ವಿಚಾರಗಳು ಪ್ರಗತಿಶೀಲವೆನಿಸಿದ್ದವು. ಸ್ವಾಮಿ ವಿವೇಕಾನಂದರು ಮಹಿಳೆಯರು ಸಮಾಜದಲ್ಲಿ ಒಂದು ಗೌರವಯುತ ಸ್ಥಾನವನ್ನು ಹೊಂದಿರಬೇಕೆಂದು ಹೇಳುತ್ತಿದ್ದ ವಿಚಾರಗಳನ್ನು ಶ್ರೀಮಾತಾ ಸಂಪೂರ್ಣವಾಗಿ ಅನುಮೋದಿಸುತ್ತಿದ್ದರು. ಸೋದರಿ ನಿವೇದಿತಾ ನಡೆಸುತ್ತಿದ್ದ ಹೆಣ್ಣು ಮಕ್ಕಳ ಶಾಲೆಯ ಪ್ರಾರಂಭೋತ್ಸವವು ಶ್ರೀಮಾತಾ ಅವರಿಂದಲೇ ನಡೆದುದಕ್ಕೆ ಅವರ ಪ್ರಗತಿಪರ ಮನೋಭಾವಕ್ಕೆ ನಿದರ್ಶನ. ಶಾಲೆಯ ಹೆಣ್ಣುಮಕ್ಕಳೊಡನೆ ತುಂಬ ಆತ್ಮೀಯವಾದ ಅನುಬಂಧವನ್ನು ಅವರು ಬೆಳೆಸಿಕೊಂಡಿದ್ದರು. ಹೆಣ್ಣುಮಕ್ಕಳು ಬೌದ್ಧಿಕವಾಗಿ, ಮಾನಸಿಕವಾಗಿ, ದೃಢವಾಗಿರಬೇಕೆಂಬುದು ಅವರ ವಿಚಾರವಾಗಿತ್ತು.

ಶ್ರೀಮಾತಾ ಆಧ್ಯಾತ್ಮಿಕವಾಗಿ ಅತ್ಯಂತ ಪ್ರಬುದ್ಧರಾಗಿದ್ದರೂ,

**ಪುಟ 10 ಕ್ಕೆ ➤**

➢ ಪುಟ 3 ರಿಂದ..... ರಾಜ್ಯ ಕಾರ್ಯಕಾರಿಣಿ...

ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದು ಕರ್ನಾಟಕಕ್ಕೆ ಹೆಮ್ಮೆಯ ವಿಷಯವಾಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ಕರ್ನಾಟಕ ಅಧ್ಯಾಪಕ ಪರಿಷತ್ ವತಿಯಿಂದ ಅಭಿನಂದಿಸಿ ಸನ್ಮಾನಿಸಲಾಯಿತು ಹಾಗೂ ರಾಷ್ಟ್ರೀಯ ಮಹಿಳಾ ಸಹ ಕಾರ್ಯದರ್ಶಿಯಾದ ಶ್ರೀಮತಿ ಮಮತಾ ಡಿ.ಕೆ. ಇವರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ ಮತ್ತು ಶ್ರೀ ಸಂದೀಪ ಬೂದಿಹಾಳ, ಕರ್ನಾಟಕ ಅಧ್ಯಾಪಕ ಪರಿಷತ್‌ನ ರಾಜ್ಯಾಧ್ಯಕ್ಷರಾದ ಡಾ. ರಘು ಅಕಮಂಚಿ, ಧಾರವಾಡ ಜಿಲ್ಲಾ ಅಧ್ಯಕ್ಷರಾದ ಶ್ರೀ ಶ್ರೀಧರ ಪಾಟೀಲ ಕುಲಕರ್ಣಿ, ಪ್ರಧಾನ ಕಾರ್ಯದರ್ಶಿ ಶ್ರೀ ಬಸವರಾಜ ದೇವರಮನಿ, ಖಜಾಂಚಿ ಶ್ರೀ ರವಿಚಂದ್ರ ಕೊಣ್ಣೂರ ಹಾಗೂ ರಾಜ್ಯದ ಎಲ್ಲ ಜಿಲ್ಲೆಯಿಂದ 100ಕ್ಕೂ ಹೆಚ್ಚು ರಾಜ್ಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ●

➢ ಪುಟ 6 ರಿಂದ..... ರಾಷ್ಟ್ರೀಯ ಕಾರ್ಯಕಾರಿಣಿ...

ಕಾರ್ಯಾಗಾರ ಮುಂತಾದವು. ಶ್ರೀ ಜೆ.ಪಿ ಸಿಂಘಾಲ್‌ಜೀರವರು ABRSM ನ ವರ್ಷದ ವರದಿಯನ್ನು ಮಂಡಿಸಿದರು.

ದಿನಾಂಕ 29.10.2017 ರಂದು ABRSM ನ ಕಾರ್ಯಕಾರಿಣಿಯ ಚುನಾವಣೆ ನಡೆಯಿತು. ಹಿಂದಿನ ಬಾರಿ ABRSM ನ ಮಹಾಮಂತ್ರಿಗಳಾಗಿ ಕೆಲಸ ನಿರ್ವಹಿಸಿದ ಶ್ರೀ ಜೆ.ಪಿ.ಸಿಂಘಾಲ್‌ಜೀ ರವರು ABRSM ನ ಅಧ್ಯಕ್ಷರಾಗಿ ಆಯ್ಕೆಯಾದರೆ, ಕರ್ನಾಟಕದ ಶ್ರೀ ಶಿವಾನಂದ ಸಿಂಧನಕೇರಾರವರು ಮಹಾಮಂತ್ರಿಗಳಾಗಿ ಆಯ್ಕೆಯಾದರು. ಶ್ರೀಮತಿ ಮಮತಾ ಡಿ.ಕೆ. ರವರು ಮಹಿಳಾ ವಿಭಾಗದ ಸಹ ಕಾರ್ಯದರ್ಶಿಯಾಗಿ ಆಯ್ಕೆಯಾಗು ವುದರೊಂದಿಗೆ ABRSM ನ ಕಾರ್ಯಕಾರಿಣಿಯಲ್ಲಿ ಕರ್ನಾಟಕ 2 ಸ್ಥಾನವನ್ನು ಪಡೆದುಕೊಂಡಿತು.

ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷೀಯ ಭಾಷಣವನ್ನು ಮಾಡಿದ ಶ್ರೀ ವಿಮಲ್ ಪ್ರಸಾದ್ ಅಗರ್‌ವಾಲ್‌ರವರು ಹೊಸದಾಗಿ ಆಯ್ಕೆಯಾದ ಎಲ್ಲಾ ಸದಸ್ಯರಿಗೂ ಉತ್ತಮ ಕಾರ್ಯ ಮಾಡಿಕೊಂಡು ಹೋಗುವಂತೆ ಹೇಳುತ್ತಾ ಎಲ್ಲರೂ ಶುಭಾಶಯ ತಿಳಿಸಿದರು. ಕಾರ್ಯ ನಿರ್ವಹಿಸುವಲ್ಲಿ ಅತಿಯಾಗಿ ನಾವು Technology ಯ ಮೇಲೆ ಅವಲಂಬಿತರಾಗಿರಬಾರದು ಎಂದು ಹೇಳುತ್ತಾ ABRSM ನಲ್ಲಿ ಕಾರ್ಯ ನಿರ್ವಹಿಸಿದ ತಮ್ಮ ಅನುಭವ ವನ್ನು ಎಲ್ಲರ ಜೊತೆ ಹಂಚಿಕೊಂಡರು. ಶಿಕ್ಷಕರು ಸದಾ ವಿದ್ಯಾರ್ಥಿಗಳು ಆದುದರಿಂದ ಸದಾ ಅಧ್ಯಯನಶೀಲರಾಗಿರ ಬೇಕೆಂದು ತಿಳಿಸಿದರು. ವಂದನಾರ್ಪಣೆ ಹಾಗೂ ಶಾಂತಿಮಂತ್ರ ದೊಂದಿಗೆ ಕಾರ್ಯಕಾರಿಣಿ ಸಭೆಗೆ ಇತಿಶ್ರೀ ಹಾಡಲಾಯಿತು. ●

**ವರ್ತಮಾನದಲ್ಲಿ ಬದುಕುವುದನ್ನು ಕಲಿತ ವ್ಯಕ್ತಿ ಭವಿಷ್ಯದಲ್ಲೂ ಸುಖವಾಗಿರಬಲ್ಲ.**

➢ ಪುಟ 7 ರಿಂದ..... ಕೊಠಾರಿ ಆಯೋಗ...

ಶಿಕ್ಷಣದ ಮೂಲಕ ವಿದ್ಯಾರ್ಥಿಗಳಲ್ಲಿ ಸಾಮಾಜಿಕ, ನೈತಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಬೆಳೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಯೋಗವು ಸಲಹೆ ನೀಡಿದೆ. ವಿವಿಧ ಹಂತದ ಪಠ್ಯಪುಸ್ತಕಗಳಲ್ಲಿ ಈ ಮೌಲ್ಯಗಳನ್ನು ಒಳಗೊಂಡ ಪಠ್ಯವಸ್ತುವನ್ನು ರಚನೆ ಮಾಡಿ ಪರೋಕ್ಷವಾಗಿ ಬೋಧಿಸುವುದು. ಶಾಲಾ ವೇಳಾಪಟ್ಟಿಯಲ್ಲಿ ಮೌಲ್ಯ ಶಿಕ್ಷಣ ನೀಡಲು ಪ್ರತ್ಯೇಕ ಅವಧಿಯನ್ನು ನಿಗಧಿಪಡಿಸುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಮೌಲ್ಯಶಿಕ್ಷಣವನ್ನು ಶಾಲೆಗಳಲ್ಲಿ ಬೋಧಿಸಲು ಕ್ರಮಗಳನ್ನು ಕೈಗೊಳ್ಳುವುದು. ಈ ಮೇಲ್ಕಂಡ ವಿವಿಧ ಗುರಿಗಳನ್ನು ಶಿಕ್ಷಣದ ಮೂಲಕ ಸಾಧಿಸುವುದರಿಂದ ಗುಣಾತ್ಮಕ ಶಿಕ್ಷಣವನ್ನು ನೀಡಲು ಅನುಕೂಲವಾಗುವುದೆಂಬ ಆಶಯವನ್ನು ಆಯೋಗವು ಸ್ಪಷ್ಟಪಡಿಸಿದೆ. ಇವುಗಳ ಅನುಷ್ಠಾನ ಮಾಡುವಲ್ಲಿ ಇನ್ನೂ ಸಾಧ್ಯವಾಗಿಲ್ಲ ಎಂಬುದೇ ಸೋಜಿಗದ ಸಂಗತಿಯಾಗಿದೆ. ಕೊಠಾರಿ ಆಯೋಗ ಶಿಫಾರಸ್ಸು ಮಾಡಿ ಅರ್ಧ ಶತಮಾನ ಕಳೆದರೂ ಆಯೋಗದ ಆಶಯಗಳನ್ನು ಅನುಷ್ಠಾನಗೊಳಿಸಲು ಪೂರ್ಣವಾಗಿ ಸಾಧ್ಯವಾಗಿಲ್ಲ. ನಾವೆಲ್ಲರೂ ಈ ಆಯೋಗದ ಸಲಹೆಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ ಕಾರ್ಯಗತ ಮಾಡೋಣ ಎಂಬ ಸಂಕಲ್ಪ ಮಾಡೋಣ. ●

➢ ಪುಟ 9 ರಿಂದ..... ಶಾರದಾಮಾತೆ...

ಎಲ್ಲರಿಂದ 'ಪೂಜ್ಯಮಾತೆ' ಎಂಬ ಗೌರವದ ಸ್ಥಾನವನ್ನು ಹೊಂದಿದ್ದರೂ ಅತಿ ಸಾಧಾರಣ, ಸರಳ ಜೀವನ ಅವರದಾಗಿತ್ತು. ರಾಮಕೃಷ್ಣರು ತೀರಿಕೊಂಡ ನಂತರ ತಮ್ಮ ಊರಾದ ಜಯರಾಂಬಟ್ಟಿಯಲ್ಲಿ ಸೋದರರೊಂದಿಗೆ ಅತ್ಯಂತ ಸರಳ ಜೀವನ ನಡೆಸುತ್ತಿದ್ದರು. ಯಾರೇ ತಮ್ಮನ್ನು ನೋಯಿಸಿದರೂ ಅದಕ್ಕೆ ಪ್ರತಿಯಾಗಿ ಪ್ರೀತಿಯ ಮಾತುಗಳನ್ನೇ ಆಡುತ್ತಿದ್ದರಲ್ಲದೆ ಕಠಿಣ ನುಡಿಗಳನ್ನಾಡುತ್ತಿರಲಿಲ್ಲ. ಇತರರಿಗೆ ಅವರ ಉಪದೇಶವೂ ಅದೇ ಆಗಿರುತ್ತಿತ್ತು. ಅವರ ಪರಿಶುದ್ಧ ಮನಸ್ಸು, ನಿಸ್ವಾರ್ಥ ಸೇವಾಮನೋಭಾವ, ಅನಿರ್ಬಂಧಿತ ಪ್ರೀತಿ, ಪ್ರಬುದ್ಧತೆ, ಆಧ್ಯಾತ್ಮದ ಪ್ರಖರತೆ ಎಲ್ಲವನ್ನೂ ಕಂಡ ಸ್ವಾಮಿ ವಿವೇಕಾನಂದರು ಅವರನ್ನು 'ಆಧುನಿಕ ಕಾಲದ ಆದರ್ಶಮಹಿಳೆ' ಎಂದೇ ಭಾವಿಸಿದ್ದರು. ಅವರಲ್ಲಿದ್ದ ಪ್ರಗತಿಪರ ಆಲೋಚನೆಗಳು ಅಚ್ಚರಿ ಮೂಡಿಸುವಂತಿರುತ್ತಿದ್ದವು. ಅದರಿಂದಲೇ ಅವರು ಈ ಆಧುನಿಕ ಕಾಲದಲ್ಲಿ ಮಹಿಳೆಯರ ಆಧ್ಯಾತ್ಮಿಕ ಜಾಗೃತಿಯು 'ಶ್ರೀಮಾತಾ' ಅವರ ಮಾರ್ಗದರ್ಶನದಿಂದ ಮತ್ತು ಅವರ ವಿಚಾರಗಳನ್ನು ಅರ್ಥಮಾಡಿಕೊಳ್ಳುವುದರಿಂದಲೇ ಸಾಧ್ಯವಾಗುವುದೆಂದು ಸ್ವಾಮಿವಿವೇಕಾನಂದರು ನಂಬಿದ್ದರು. 1920ರ ಜುಲೈ 21 ರಂದು ಕಾಲವಾದ ಶ್ರೀಮಾತಾ ಹೇಳುತ್ತಿದ್ದರು. "ರಾಮಕೃಷ್ಣರು ಎಲ್ಲರೊಡನೆಯೂ ಮಾತೃಭಾವದೊಂದಿಗೆ ಪ್ರೀತಿಯನ್ನು ತೋರುತ್ತಿದ್ದರು. ಆ ಪವಿತ್ರವಾದ ಮಾತೃತ್ವವನ್ನು ಹೊಂದಿ ಅವರ ಕಾರ್ಯವನ್ನು ಮುಂದುವರಿಸುತ್ತ ಇಡೀ ಜಗತ್ತಿಗೇ ಅದರ ಮಹತ್ವದ ಅರಿವು ಮೂಡಿಸುವುದು ನನ್ನ ಪಾಲಿನ ಕರ್ತವ್ಯವಾಗಿದೆ." ಅದಕ್ಕೇ ಅವರನ್ನು 'ವಿಶ್ವಮಾತೆ' ಎಂದಿರುವುದು. ಇದೇ ಡಿಸೆಂಬರ್ 22ಕ್ಕೆ ಅವರ ಜನ್ಮದಿನ. ಆ ವಿಶ್ವಮಾತೆಗೆ ಸಾಷ್ಟಾಂಗ ನಮಸ್ಕಾರ. ●

# ಶಿಕ್ಷಕರಿಗೊಂದು ದಾರಿದೀಪ ಕೃ. ನರಹರಿ



ಇಸವಿ 1965 ಪ್ರಾಯಶಃ ಏಪ್ರಿಲ್–ಮೇ ತಿಂಗಳು ಇರಬಹುದು. ನಾಲ್ಕೈದು ಮಂದಿ ಶಿಕ್ಷಕರು, ಶಿಕ್ಷಣಾಭಿಮಾನಿಗಳು ಒಂದೆಡೆ ಕಲೆತರು. ಮೆಕಾಲೆ, ಮಾರ್ಕ್ಸ್ ಮಾನಸಿಕ ಶಿಕ್ಷಣ ಪದ್ಧತಿ ಬದಲಾಗಬೇಕು, ಯಾವುದೇ ಬಗೆಯ ಅನ್ಯಾಯಕ್ಕೆ ತಲೆಬಾಗದಂಥ, ಭಾರತೀಯ ಪರಂಪರೆಗೆ ಅನುಗುಣವಾಗಿ ಶಿಕ್ಷಣ ನೀಡುವಂಥ ಶಿಕ್ಷಕರನ್ನು ಒಗ್ಗೂಡಿಸಿ ಒಂದು ಶಿಕ್ಷಕರ ಸಂಘಟನೆಯನ್ನು ಕಟ್ಟಬೇಕೆಂದು ನಿರ್ಧರಿಸಿದರು. ಅವರ ಚಿಂತನೆಯ ಫಲವಾಗಿ ಜನ್ಮ ತಳೆದದ್ದು ‘ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ’. ಅದೇ ನಮ್ಮ ರಾಜ್ಯದ ಅಗ್ರಗಾಮಿ ಶಿಕ್ಷಕ ಸಂಘಟನೆ.

ಅಂದು ಕಲೆತು ಚಿಂತಿಸಿದ ನಾಲ್ಕೈದು ಮಂದಿ ಚಿಂತಕರಲ್ಲಿ ಕೃ. ನರಹರಿಯವರೂ ಒಬ್ಬರು. ಅವರಾಗ ಬಿ.ಎಂ.ಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಧ್ಯಾಪಕರು. ಕಳೆದ 52 ವರ್ಷಗಳಲ್ಲಿ ಅವರು ಸದಾ ಚಿಂತಿಸುತ್ತಿದ್ದುದು ಶಿಕ್ಷಣ ಕ್ಷೇತ್ರದ ಸ್ವಚ್ಛತೆಯ ಬಗ್ಗೆ. ಶಿಕ್ಷಕರ ಕುಂದು ಕೊರತೆಗಳ ಬಗ್ಗೆ, ಶಿಕ್ಷಕರನ್ನು ನಿಜವಾದ ಅರ್ಥದಲ್ಲಿ ‘ಗುರು’ವಾಗಿಸುವ ಬಗ್ಗೆ. ಇದಕ್ಕಾಗಿ ಅವರದ್ದು ಅವಿರತ ಪರಿಶ್ರಮ.

ಪತ್ರಕರ್ತ ಗೆಳೆಯ, ದು.ಗು. ಲಕ್ಷ್ಮಣ ಹೇಳಿದ್ದು. ಸುಮಾರು ವರ್ಷಗಳ ಹಿಂದೆ ಶಿವಮೊಗ್ಗಾ ಜಿಲ್ಲೆಯ ಒಂದು ತಾಲ್ಲೂಕಿನಲ್ಲಿ ಶಿಕ್ಷಕರಾಗಿದ್ದ ತಮ್ಮ ಸ್ನೇಹಿತ ಹಾದಿಗಲ್ಲು ಲಕ್ಷ್ಮೀನಾರಾಯಣರೊಡಗೂಡಿ ಒಂದು ಶಿಕ್ಷಕರ ಸಭೆಯನ್ನು ಏರ್ಪಡಿಸಿದ್ದರು. 100 ಜನ ಶಿಕ್ಷಕರು ಭಾಗವಹಿಸುತ್ತಾರೆ ಎಂಬ ಖಾತ್ರಿ. ನರಹರಿಯವರು ಆ ಸಭೆಗೆ ರಾತ್ರಿ ಬಸ್‌ನಲ್ಲಿ ಹೊರಟು ಬೆಳಗ್ಗೆ ತಲುಪಿದರು. ಸಭೆಯ ಸ್ಥಳಕ್ಕೆ ಸರಿಸಮಯಕ್ಕೆ ಬಂದರು. ನಿಮಿಷಗಳು, ಗಂಟೆಗಳು ಉರುಳಿದರೂ ಒಬ್ಬ ಶಿಕ್ಷಕರೂ ಬರಲಿಲ್ಲ. ಸಭೆ ಏರ್ಪಡಿಸಿದ್ದ ಲಕ್ಷ್ಮಣರವರಿಗೆ ಆತಂಕ, ಬೇಸರ. ಆಗ ನರಹರಿಯವರೇ ಅವರನ್ನು “ಚಿಂತಿಸಬೇಡಪ್ಪ ಒಮ್ಮೊಮ್ಮೆ ಹೀಗಾಗುತ್ತದೆ. ನನಗೇನು ಬೇಸರವಿಲ್ಲ ನಿಮ್ಮಿಬ್ಬರ ಸಹವಾಸವಂತೂ ಸಿಕ್ಕಿತಲ್ಲ” ಎಂದು ಸಮಾಧಾನಪಡಿಸಿದರು. ಇದು ನರಹರಿಯವರ ವ್ಯಕ್ತಿತ್ವ.

ಭಗವದ್ಗೀತೆಯ “ಸುಖದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ” ಎಂಬ ವಾಕ್ಯವನ್ನು ಮೈಗೂಡಿಸಿಕೊಂಡಿದ್ದರು. ನಮ್ಮ ನರಹರಿಯವರು.

ಕಿಶೋರಾವಸ್ಥೆಯಲ್ಲೇ ತಮ್ಮ ಅಣ್ಣನವರಾದ ಕೃ.ಸೂರ್ಯನಾರಾಯಣರಾಯರಿಂದ ಪ್ರೇರಣೆ ಪಡೆದು, ಆಜೀವನ ಬ್ರಹ್ಮಚಾರಿಯಾಗುಳಿದು, ಸಮಾಜ ಸೇವೆ ಮಾಡಬೇಕೆಂದು ಸಂಕಲ್ಪತೊಟ್ಟರು. ಅದರಂತೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂಲಕ ಹಲವು ಮುಖಗಳಲ್ಲಿ ಇಂದಿಗೂ ಸದಾ ಸೇವಾಮಗ್ನರಾಗಿರುವುದನ್ನು ನಾವು ಕಾಣಬಹುದು.

‘ತ್ರಿಕರಣಶುದ್ಧಿ’ ಅವರ ಹುಟ್ಟು ಗುಣ, ಮೃದುಮಾತು, ಹಸನ್ಮುಖ. ಕೋಪಕ್ಕೆ ಅವರ ಬಳಿ ಸುಳಿಯಲು ಹೆದರಿಕೆ. ಅಧ್ಯಯನ ನಿರತ, ಸೇವಾ ತತ್ಪರ. ತನಗಾಗಿ ಏನನ್ನು ಅಪೇಕ್ಷಿಸದ, ಸಮಾಜಕ್ಕಾಗಿ ಎಲ್ಲವನ್ನೂ ನೀಡುವ ವ್ರತಧಾರಿ. ‘ಪರೋಪಕಾರಾರ್ಥ ಮಿದಂಶರೀರಂ’ ಎಂಬುದು ಅವರ ಜೀವನದ ಸ್ವೀಕೃತಧ್ಯೇಯ. ಸೇವೆಯೆಂಬ ಯಜ್ಞದಲ್ಲಿ ಸಮಿಧೆಯಂತೆ ಉರಿಯುತ್ತಲೇ ತಮ್ಮ ಜೀವನದ ಸಾರ್ಥಕ 85 ವಸಂತಗಳನ್ನು ಕಳೆದಿದ್ದಾರೆ ನರಹರಿಯವರು.

ನರಹರಿಯವರ ವಿದ್ಯಾರ್ಥಿಗಳು, ಶುಭಾಕಾಂಕ್ಷಿಗಳು, ಅವರಿಂದ ಪ್ರೇರಣೆ ಪಡೆದ ಹಲವರು ಸೇರಿ ಅವರನ್ನು ಬಲವಂತವಾಗಿ ಒಪ್ಪಿಸಿ ಇದೇ ಡಿಸೆಂಬರ್ 10 ರ ಭಾನುವಾರ ಅವರಿಗೊಂದು ಸನ್ಮಾನ ಸಮಾರಂಭವನ್ನು ಆಯೋಜಿಸಿದ್ದಾರೆ. ನರಹರಿಯವರಿಗೆ ಸನ್ಮಾನವೆಂದರೆ ಅದು ಓರ್ವ ವ್ಯಕ್ತಿಗಲ್ಲ. ಅವರು ಸ್ವೀಕರಿಸಿರುವ ಧ್ಯೇಯಕ್ಕೆ, ಅವರ ವಿಚಾರಕ್ಕೆ, ಸಮಾಜಕ್ಕಾಗಿ ಬದುಕುವುದು ಹೇಗೆಂದು ತೋರಿಸಿಕೊಟ್ಟಿರುವ ವ್ಯಕ್ತಿತ್ವಕ್ಕೆ.

ಬನ್ನಿ, ನಾವೆಲ್ಲರೂ ಕೂಡಿ ಇಂಥ ಆದರ್ಶ ಶಿಕ್ಷಕರೊಬ್ಬರ ಸನ್ಮಾನ ಸಮಾರಂಭದಲ್ಲಿ ಭಾಗಿಗಳಾಗಿ ಅವರು ನಡೆದ ಹಾದಿಯಲ್ಲಿ ನಾವೂ ನಾಲ್ಕಾರು ಹೆಜ್ಜೆ ಹಾಕುವ ಸಂಕಲ್ಪ ಮಾಡೋಣ. ನಮ್ಮ ಬದುಕನ್ನೂ ಸಾರ್ಥಕಪಡಿಸಿಕೊಳ್ಳೋಣ.

**ಹೆಚೆನ್ನಾರ್,** (ಲೇಖಕರು ತಮ್ಮ ಕಿಶೋರಾವಸ್ಥೆಯಿಂದಲೂ ನರಹರಿಯವರ ಮಾರ್ಗದರ್ಶನದಲ್ಲಿ ಬೆಳೆದವರು)

## ಸಮಾರಂಭದ ವಿವರ

**ದಿನಾಂಕ: 10.12.2017**
**ಭಾನುವಾರ**

| | |
|---|---|
| ಸ್ಥಳ : | ಬೆಂಗಳೂರು, ಜೆ.ಪಿ ನಗರದಲ್ಲಿರುವ, ಆರ್.ವಿ. ದಂತಮಹಾವಿದ್ಯಾಲಯದ ಸಭಾಂಗಣ |
| ಸಮಯ : | ಬೆಳಗ್ಗೆ 11 ಗಂಟೆ |
| ಮುಕ್ತಾಯ : | ಮಧ್ಯಾಹ್ನ 2 ಘಂಟೆಗೆ ಭೋಜನಾನಂತರ |
| ಮುಖ್ಯ ಅತಿಥಿಗಳು : | ಡಾ॥ ಕೆ. ಎಸ್. ನಾರಾಯಣಾಚಾರ್ಯ<br>ಖ್ಯಾತ ಅಂಕಣಕಾರರು, ವಿಚಾರವಾದಿಗಳು |

Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Publishing : 17-11-2017 Date of Posting 20th or 21st of every month

# 12–11–2017 ರಂದು ಹುಬ್ಬಳ್ಳಿಯಲ್ಲಿ ನಡೆದ
# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕಾರಿಣಿ ಸಭೆಯ ಚಿತ್ರಗಳು



ಹುಬ್ಬಳ್ಳಿಯ ಕಾರ್ಯಕಾರಿಣಿಯಲ್ಲಿ ಪದಾಧಿಕಾರಿಗಳು ದೀಪ ಬೆಳಗುತ್ತಿರುವುದು



ಇತ್ತೀಚೆಗೆ ಎಬಿಆರ್‌ಎಸ್‌ಎಂನ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ರಾಜ್ಯಾಧ್ಯಕ್ಷ ಶಿವಾನಂದ ಸಿಂಧನಕೇರ ಅವರಿಗೆ ಸನ್ಮಾನ




ಹುಬ್ಬಳ್ಳಿಯ ಕಾರ್ಯಕಾರಿಣಿ ಸಭೆಯಲ್ಲಿ ಉಪಸ್ಥಿತರಿದ್ದ ಪದಾಧಿಕಾರಿಗಳು



ಎಬಿಆರ್‌ಎಸ್‌ಎಂನ ಮಹಿಳಾ ಸಹ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ಶ್ರೀಮತಿ ಮಮತಾ ಡಿ.ಕೆ. ಅವರಿಗೆ ಸನ್ಮಾನ

**ಗಮನಿಸಿ :** ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ **akss1950@gmail.com** ಇ–ಮೇಲ್‌ಗೆ ಕಳುಹಿಸಿಕೊಡಿ

IF UNDELIVERED
PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram
Bangalore-560020. ✆ : 080-23466495
Printed at : RASHTROTTHANA MUDRANALAYA
Bangalore - 560 019.

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

srushtidesigns@gmail.com